ನಮ್ಮ ವಿಶ್ವವಿದ್ಯಾನಿಲಯಗಳು ವಿದ್ಯಾವಂತ ದಲಿತರ ಬಗ್ಗ ತಳೆದಿರುವ ಘೋರ ಣೆಯು ಪಂಚಮ ಮುಂದಿನ ಸಂಚಿಕೆಗ ವಸ್ತುವಾಗಲಿದೆ. ಈ ಬಗ್ಗೆ ನಿಮ್ಮ ಅನುಭವ, ಅಂಕಿ ಅಂಶ, ಸಂದ ರ್ಶನಗಳಲ್ಲಾದ ವಂಚನೆ ಇತ್ಯಾದಿ ಸಿಕ್ಕಷ್ಟು ಕಳುಹಿಸಿಕೊಡಿರಿ. ಅಗತ್ಯವಿರುವ ಕಡೆ ಬರಹಗಾರರ ಹೆಸರನ್ನು ಗೋಪ್ಯವಾಗಿ ಇಡಲಾಗುವುದು. ಸಂ

ಪಂಚಮ


ಸಂಪುಟ : 5 ಸಂಚಿಕೆ : 15–16 ಬೆಲೆ : 50 ಪೈಸೆ ಅಕ್ಟೋಬರ್ 1981

ನೀರು ಕುಡಿಯಲೂ ಬಿಡದಂಥ ಸವರ್ಣೀಯರ ನಡುವೆ

ಕಾಡುವಡ್ಡರಗುಡಿ ಹುಣಸೂರಿನ ಒಂದು ಸಣ್ಣ ಹಳ್ಳಿ. ಈ ಹಳ್ಳಿಯ ದಲಿತರ ಜೀವನ ಅಲ್ಲೋಲ ಕಲ್ಲೋಲವಾಗಿದೆ. ಅವರು ತಿನ್ನುವ ಅನ್ನಕ್ಕೆ ಕಲ್ಲು ಬಿದ್ದಿದೆ. ಕುಡಿಯುವ ನೀರಿನ ಕೆರೆಯನ್ನು ಒಡೆದು ಹಾಕಲಾಗಿದೆ. ಇದಿಷ್ಟು ಸಾಲದೆ ಇಲ್ಲಿನ ದಲಿತರ ಮೇಲೆ ಹಲ್ಲೆ ನಡೆದಿದೆ. ಇದಕ್ಕೆಲ್ಲ ಕಾರಣರಾಗಿರುವವರು ಸವರ್ಣೀಯರಾದ ಭೂಮಾಲೀಕ ಪಂಚನಕೆರೆ ಸುಬ್ಬೇಗೌಡ, ಮೈಸೂರು ರಾಮಕೃಷ್ಣ ಹಾಗೂ ಗ್ರಾಮ-ಲೆಕ್ಕಿಗ ಜಾಹೀರ್‌ಖಾನ್.

ಕಾಡುವಡ್ಡರಗುಡೀಲಿ ಸುಮಾರು ೨೪ ಮಂದಿ ದಲಿತರು ಇದ್ದಾರೆ. ಇವರೆಲ್ಲ ಇಲ್ಲಿಗೆ ಜೀವನ ಹುಡುಕತ್ತ, ಬಂದು ನೆಲೆಸಿದ ಅಲೆಮಾರಿಗಳು, ಇಲ್ಲಿನ ಕಾಡು ಕಡಿದು ನೆಲ ಉತ್ತು ಹಸನು ಮಾಡಿ ಉಳುಕತೊಡಗಿದರು. ಇಲ್ಲಿರುವ . ಮಾದಯ್ಯನ ಕೆರೆಯನ್ನು ಇತ್ತೀಚೆಗೆ ಬಿ.ಡಿ.ಒ. ಆಫೀಸಿನವರು ದುರಸ್ತಿ ಮಾಡಿಸಿದ್ದರು. ಈ ಜನಕ್ಕೆ ಸೈಟುಕೊಟ್ಟರು. ಕೆರೆಗೆ ಹೋಗಿ ಬರಲು ಒಂದು ರಸ್ತೆ ಮಾಡಿಕೊಟ್ಟರು. ಇದೆಲ್ಲ ಮೇಲಂಡ ಸವರ್ಣೀಯರಿಗೆ ಕಣ್ಣುರಿಯಾಯಿತು. ದಲಿತರು ಏಳಿಗೆಯಾಗುವುದು ಇವರಿಗೆ ಸುತರಾಂ ಇಷ್ಟವಿರಲಿಲ್ಲ.

ಒಂದು ದಿನ ಮೇಲ್ಕಂಡವರ ಕೂಲಿಯಾಳುಗಳು ಕೆರೆಯನ್ನು ಒಡೆಯುತ್ತಿದ್ದಾಗ ಅದನ್ನು ತಡೆದ ದಲಿತರು ಹೀಗೆ ಮಾಡ ಬೇಡ್ರಪ್ಪ ಈ ಕೆರೆಯಿಂದ್ಲೆ ನಾವು ಜೀವಿಸುತ್ತಾಇರೋದು ಎಂದು ಕೈ ಮುಗಿದು ಬೇಡಿಕೊಂಡರು. “ನಮಗೇನು ಗೊತ್ತಿಲ್ಲ ನೀವು ಸುಬ್ಬೇಗೌಡ್ರನ್ನೇ ಕೇಳಿ” ಎಂದು ಕೆಲಸ ನಿಲ್ಲಿಸಿ ಹೋದರು.



ಒಡೆದ ಕೆರೆ ನಡುವೆ ದಲಿತರು

ಮಾರನೇ ದಿನ ದಲಿತರು ಈ ವಿಚಾರವಾಗಿ ಹುಣಸೂರು ಪೋಲೀಸ್ ಠಾಣೆಗೆ ಕಂಪ್ಲೇಂಟ್ ಕೊಡಲು ಹೋದರು. ಈ ಮಧ್ಯೆ ಪ್ರವೇಶಿಸಿದ ಸುಬ್ಬೇಗೌಡನು ದಲಿತರ ಎದುರು ಹಲ್ಲು ಕಿರಿದು “ಕಂಪ್ಲೇಂಟು ಕೊಡಬ್ಯಾಡ್ರಪ್ಪ ಪಂಚಾಯ್ತಿಲೇ ತೀರ್ಮಾನ ಮಾಡ್ಕಳನ” ಎಂದು ದಲಿತರಿಗೆ ಆಸೆ ಹುಟ್ಟಿಸಿದ. ಸದರಿ ದಲಿತರು ಆತನನ್ನು ನಂಬಿದರು. ಕಂಪ್ಲೇಂಟು ಕೊಡಲಿಲ್ಲ. ಅನಂತರ ಕೆಲವು ದಿವಸಗಳಾದ ಮೇಲೆ ಮಾತಿಗೆ ತಪ್ಪಿದ ಸುಬ್ಬೇ

ಶಂಕರ್ ದೇವನೂರ್

ಗೌಡ ಕೆರೆ ಒಡೆಸಿ ರಾತ್ರೋರಾತ್ರಿ ಭತ್ತದ ಪೈರು ನೆಡಸಿದ. ಇದಕ್ಕೆಲ್ಲ ಹುಣಸೂರು ಪೋಲೀಸರ ಕುಮ್ಮಕ್ಕು ಇತ್ತು. ಪರಿಸ್ಥಿತಿ ಗಂಭೀರವಾಗಿ ದಲಿತರು ತಾಲ್ಲೋಕು ಬೋರ್ಡು ಪ್ರೆಸಿಡೆಂಟ್ ಶ್ರೀನಿವಾಸಗೌಡರ ಹತ್ತಿರ ತಮ್ಮ ಕಷ್ಟ ಹೇಳಿಕೊಂಡರು. ಆಗ ಅವರು “ನೀವು ಏನೂ ಭಯ ಪಡಬೇಡಿ ನಾನು ಎಲ್ಲಾನೂ ಮಾಡಿಸ್ಕೊಡ್ತೀನಿ ನಿಮ್ಮ ವಿಚಾರವನ್ನು ತಹಸೀಲ್‌ದಾರರಿಗೆ ತಿಳಿಸ್ತೀನಿ’ ಎಂದರು. ಈ ವೇಳೆಗೆ ಕೆರೆಯ ಅರ್ಧಭಾಗ ಒಡೆದು ಹಾಕಲಾಗಿತ್ತು. [4ನೇ ಪುಟಕ್ಕೆ]

ಈ ಸಂಚಿಕೆಯಲ್ಲಿ

ಹಣವೊ ಹಿಂದೂ ಹಣವೋ ?

ಮೀನಾಕ್ಷಿಪುರಂ ಅಸ್ಪೃಶ್ಯರ ಮತಾಂತರಕ್ಕೆ ಆರಬ್ ಹಣ ಕಾರಣವೆಂದು ಹಿಂದೂಗುತ್ತಿಗೆದಾರರಾದ ಆರೆಸೆಸ್ ವಕ್ತಾರರೂ ಮಠಗಳ ವಕ್ತಾರ ಪೇಜಾವರ ಸ್ವಾಮಿಯೂ ನುಡಿಯುತ್ತಿದ್ದಾರೆ. ಹಿಂದೂ ಏಕತಾ ಆಚರಿಸುವ ಈ ಜನ ನಾಲಿಗಾ ಏಕತಾ ಆಚರಿಸುವ ಅಗತ್ಯವಿದೆ. ತಮ್ಮನ್ನು ತಾವು ನೋಡಿಕೊಳ್ಳುವುದಕ್ಕೆ ಇವರಿಗೆಲ್ಲ ಭಯವಿರಬೇಕು. ಪ್ರಜ್ಞಾವಂತರಾಗಿ ತಮ್ಮ ಧರ್ಮವನ್ನು ತಾವು ಈ ಜನ ನೋಡಿಕೊಂಡರೆ ಕೊಳೆಯುತ್ತಿರುವ ಗಬ್ಬು ವಾಸನೆಯ ಹೆಣವೇ ಹಿಂದೂವೆಂಬ ಅರಿವಾದರೂ ಇವರಿಗುಂಟಾಗಬಹುದು. ಅಸ್ಪೃಶ್ಯತೆ ಜಾತಿಯತೆಯನ್ನು ಹಿಂದೂ ಧರ್ಮದೊಳಗೆ ತುಂಬಿ ಹಿಂದೂ ಧರ್ಮವೆಂದರೆ ಅಸಮಾನತೆಯ ಅಧರ್ಮ ಎನಿಸಿದ ಹಿಂದೂಪಟ್ಟಾರರ ಸಸ್ಯಹಾರಿ ಹಲ್ಲುಗಳ ಸಂದಿನಲ್ಲಿ ಜಾತಿದಹನ ಖಾಂಡಕ್ಕೆ ಸಿಕ್ಕಿ ಬಲಿಯಾದ ಅಸಂಖ್ಯ ದಲಿತರ ಎಲುಬುಗಳ ಕೂಗು ಕೇಳಬಹುದು. ಜಾತಿ ಹೆಸರಲ್ಲಿ ರಾಷ್ಟ್ರ ಒಡೆದಿಟ್ಟು ಪರಕೀಯರಿಂದ ಭಾರತಮಾತೆಯನ್ನು ಅತ್ಯಾಚಾರಕ್ಕೆ ಮಾಡಿಸಿ ಅದರಲ್ಲೂ ಆನಂದಿಸಿದ ಹಿಂದೂ ರಾಷ್ಟ್ರದ್ರೋಹಿಗಳಿಗೆ ಯಾವ ಹೆಸರಿನಿಂದ ಕರೆದರೆ ಸೂಕ್ತವೆಂದು ಸಾರ್ವಜನಿಕರು ತಿಳಿಸಲಿ ಎಂದು ವಿನಂತಿಸುತ್ತಿದ್ದೇನೆ.

—ಗಿರಿಜಮ್ಮ, ಮೈಸೂರು

[ಸೂಕ್ತ ಹೆಸರನ್ನು ತಿಳಿಸಿದವರಿಗೆ ಹತ್ತು ರೂಪಾಯಿ ಸಂಭಾವನೆ ನೀಡಲಾಗುವುದು - ಸಂ]

ನಮ್ಮ ಮಾತು

ಐತಿಹಾಸಿಕ ನಿರ್ಣಯ

ದಲಿತರ ಬಗ್ಗೆ ದೊಡ್ಡ ಮಾತು ಮತ್ತು ಮೊಸಳೆ ಕಣ್ಣೀರು ಸುರಿಸುತ್ತ ಬಂದಿರುವ ಭಾರತೀಯ ಪರಂಪರೆಯು ಅಲ್ಲಾಡುವಂಥ ನಿರ್ಣಯವೊಂದನ್ನು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್‌ನಲ್ಲಿ ವಿ. ಹೆಚ್. ಗೌಡರು ಮಂಡಿಸುವ ಎಡೆಗಾರಿಕೆ ಮಾಡಿರುವುದಲ್ಲದೆ ಆಶ್ಚರ್ಯಕರವಾಗಿ ಒಂದು ಬಹುಮತದಿಂದ ಗೆದ್ದು ಸೆನೆಟ್ ಇತಿಹಾಸವನ್ನು ಬೆಚ್ಚಿ ಬೀಳಿಸಿರುವರು.

ನಿರ್ಣಯ: 'ವಿಶ್ವವಿದ್ಯಾನಿಲಯದ ಅಧ್ಯಾಪಕ, ರೀಡರ್, ಪ್ರಾಧ್ಯಾಪಕರುಗಳ ಹುದ್ದೆಗಳಲ್ಲಿ ಶೇಕಡಾ ಹದಿನೆಂಟರಷ್ಟು ದಲಿತರನ್ನು ತುಂಬುವವರೆಗೂ ದಲಿತರನ್ನೇ ನೇಮಕ ಮಾಡಿಕೊಳ್ಳಬೇಕು. ಶೇಕಡಾ ಹದಿನೆಂಟು ಭರ್ತಿಯಾಗುವವರೆಗೂ ಬೇರೆ ಯಾರನ್ನೂ ನೇಮಕ ಮಾಡಿಕೊಳ್ಳಬಾರದು'

ಮೇಲಿನ ನಿರ್ಣಯ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್‌ನಲ್ಲಿ ಒಂದು ಬಹುಮತದಿಂದ ಒಪ್ಪಿತವಾಗಿ ಮೇಲಕ್ಕೆ ಹೋಗಿದೆ. ಮೇಲಿನವರು ಈ ನಿರ್ಣಯ ಕಂಡು ಮೈಲಿಗೆಯಾಗಬಹುದೆಂದು ಹೆದರಿ ಮುಟ್ಟಿಸಿಕೊಳ್ಳುತ್ತಾರೊ ಇಲ್ಲವೊ ತಿಳಿಯದು. ಆದರೆ ಈ ನಿರ್ಣಯದ ಹಿನ್ನೆಲೆಯಲ್ಲಿ ಕ್ರೂರ ವಾಸವ ಇದೆ. ಗ್ರಾಮಾಂತರ ಪ್ರದೇಶವು ದಲಿತರನ್ನು ಕ್ರೂರವಾಗಿ ದೈಹಿಕವಾಗಿ ಕೊಲ್ಲುತ್ತಿದ್ದರೆ, ವಿಶ್ವವಿದ್ಯಾನಿಲಯವು ನಾಜೋಕಾಗಿ ಮಾನಸಿಕವಾಗಿ ಕೊಲ್ಲುತ್ತಿರುವುದು. ಓದುವಾಗ ದಲಿತ ವಿದ್ಯಾರ್ಥಿಗಳದು ಯಾತನೆಯ ಅವಮಾನದ ಒಂದು ಕಾಂಡವಾದರೆ ಓದಿಯಾದ ಮೇಲೆ ನಿರುದ್ಯೋಗದ ಬವಣೆಯೊಡನೆ ಜಾತಿಯ ಭಿನ್ನಭಾವದ ಬೆಂಕಿಯಲ್ಲಿ ಬೇಯಬೇಕಾಗುವುದು. ಇಂಥ ಪರಿಸ್ಥಿತಿಯಲ್ಲಿ ನಮ್ಮ ವಿಶ್ವವಿದ್ಯಾನಿಲಯವೂ ದಲಿತ ಅರ್ಹ ಅಭ್ಯರ್ಥಿಗಳು ಇದ್ದರೂ ಕೆಲಸಕ್ಕೆ ತೆಗೆದುಕೊಳ್ಳದೆ ಕಾರಣಗಳನ್ನು ಕೊಡುತ್ತಲೊ ಮೇಲಕ್ಕೆ ಕಳಿಸುತ್ತಲೋ ದಲಿತರು ಇಲ್ಲದೆಡೆ ಮೊಸಲಾತಿ ಇಡುತ್ತ ವಂಚಿಸುತ್ತ ಬಂದಿರುವುದು. ಇದನ್ನು ದಲಿತರೆನ್ನಿಸಿಕೊಂಡ ನಾಮಕಾವಸ್ತೆ ನಾಮಿನೇಟಡ್ ಸೆನೆಟ್ ಸಿಂಡಿಕೇಟ್ ಸದಸ್ಯರು ಕೇವಲ ಕಣ್ಣು ಮಿನಿಮಿನಿ ಬಿಟ್ಟು ನೋಡುತ್ತ ಮಾತಾಡಲಾಗದಷ್ಟು ಬಾಯಿತೆರೆದು ಕುಳಿತು ಆ ಬಾಯಿಗೇನಾದರೂ ಬಿದ್ದರೆ ಅಷ್ಟಕ್ಕೇ ಧನ್ಯರಾಗುತ್ತ ಹೊಟ್ಟೆಯಾಪ್ತಿ ನಡೆಸುತ್ತಿರುವ ಹತಾಶ ಸಂದರ್ಭದಲ್ಲಿ ಶ್ರೀ ವಿ. ಹೆಚ್. ಗೌಡರ ನಿರ್ಣಯ ಏಕೈಕ ದಲಿತದನಿಯಾಗಿದೆ.

ಮುಂದಿನ ಪಂಚಮವು ನಮ್ಮ ಓದುಗರಿಗೆ ವಿಶ್ವವಿದ್ಯಾನಿಲಯದ ಕರಾಳ ದರ್ಶನ ಮಾಡಿಸಲಿದೆ.

ಸಂಪಾದಕ: ರಾಮದೇವ ರಾಕೆ; ವ್ಯವಸ್ಥಾಪಕ: ಬಿ. ಕೃಷ್ಣಪ್ಪ; ಪ್ರಕಾಶಕ: ಎಚ್. ಗೋವಿಂದಯ್ಯ

ಸಂಪಾದಕ ಮಂಡಲಿ:

ದೇವನೂರ ಮಹಾದೇವ, ಸಿದ್ಧಲಿಂಗಯ್ಯ, ಇಂದೂಧರ ಹೊನ್ನಾಪುರ, ಕೆ.ಬಿ. ಸಿದ್ದಯ್ಯ
ಬೋಳವಾರು ಮಹಮದ್‌ಕುಂಞ, ಶ್ರೀಧರ ಕಲಿವೀರ, ಶಿವಾಜಿ ಗಣೇಶನ್, ಜಂಬಣ್ಣ ಅಮರಚಿಂತ
ಕೆ. ರಾಮಯ್ಯ, ರಂಜಾನ್ ದರ್ಗ, ಗುರುರಾಜ ಬೀಡಿಕರ್, ದೇವಯ್ಯ ಹರವೆ

ಚಂದಾ ವಿವರ: ವಾರ್ಷಿಕ ಚಂದಾ: 10 ರೂಪಾಯಿ, ಆಜೀವ ಚಂದಾ: 200 ರೂಪಾಯಿ

ವಿಳಾಸ: ಮಾಸ್ತಿಗುಡಿ, 2ನೇ ಕ್ರಾಸ್, ಅಶೋಕಪುರಂ, 570008

ಊರಿನಲ್ಲೇ ಇದ್ದರೆ ....

ಮಾನ್ಯರೇ,

ಮತಾಂತರದ ಸುದ್ದಿಯನ್ನು ಹೊತ್ತು ತಂದ ಪಂಚಮ ವಿಶೇಷಾಂಕ (ಸಂ.13–14, ಸೆ.81) ವಾರ ಪತ್ರಿಕೆಯನ್ನು ಓದಿದ ಮೇಲೆ, ನಾನು ವಿದ್ಯಾವಂತನಾಗದೆ ಊರಿನಲ್ಲಿಯೇ ಇದ್ದಿದ್ದರೆ ನೆಮ್ಮದಿಯಿಂದಸುಖವಾಗಿ ಬದುಕುತ್ತಿದ್ದೆನೇನೋ ಅನ್ನಿಸಿತು. ನಾನು ಹುಟ್ಟಿ ಬೆಳೆದ ಪರಿಸರದಲ್ಲಿ ನನಗೆ ತಿಳಿದ ಮಟ್ಟಿಗೆ ಹರಿಜನರ ಮೇಲೆ (ನಮ್ಮ ಕಡೆ ಮಾದಿಗರೆಂದು ಕರೆಯುವುದು ರೂಢಿ) ಯಾವ ರೀತಿಯ ಅಮಾನುಷ ಕೃತ್ಯಗಳೂ ನಡೆದಿಲ್ಲ ಎಂದು ಧೈರ್ಯವಾಗಿ ಹೇಳಬಲ್ಲೆ. ಕೈ ಕಾಲು ಕತ್ತರಿಸುವುದು, ಹೆಂಗಸರ ಮಾನಾಪಹರಣ ಮಾಡುವುದು, ಪ್ರಾಣಿಗಳಿಗಿಂತ ತುಚ್ಛವಾಗಿ ಕಾಣುವುದು ಮುಂತಾದ ಸುದ್ದಿಗಳನ್ನು ಓದಿದ ಮೇಲೆ ಮತಾಂತರದಿಂದ ಇವುಗಳನ್ನು ತಡೆಯುವುದು ಕಷ್ಟವೆನಿಸುತ್ತದೆ. ನಾನು ತಿಳಿದ (ಅನುಭವಿಸಿದ) ಮಟ್ಟಿಗೆ ಮೇಲ್ಜಾತಿ ಅಥವಾ ದೊಡ್ಡವರೆಂದು ತಿಳಿದುಕೊಂಡಿದ್ದವರು ಅದೇ

ಪ್ರತಿಕ್ರಿಯೆ

ಬುದ್ಧಿ-ಮನಸು ದಾಟಿ

ಬುದ್ಧಿಪೂರ್ವಕವಾಗಿ ಮಾತ್ರ ದಲಿತ ಹೋರಾ
ಬಗ್ಗೆ ಕಾಳಜಿಯಿದ್ದ ನನಗೆ ಪಂಚಮಗಳನ್ನು ಓ
ತ್ತಿದ್ದಂತೆ ಬುದ್ಧಿಯನ್ನು ದಾಟಿ, ಮನಸ್ಸನ್ನು ದ
ಎದೆಯಾಳದಲ್ಲಿ ಯಾತನೆ ತಟ್ಟೆಹತ್ತಿದೆ.

ಮತಾಂತರದ ಬಗ್ಗೆ ಒಂದು ಮಾತು. ಧಮ
ತೀತ *(Irreligion)* ಸಮಾಜದಲ್ಲಿ ನಂಬಿಕೆಯಿ
ವ್ಯಕ್ತಿ ನಾನು. ಮತಾಂತರಕ್ಕಿಂತ ಎಲ್ಲ ಮತ
ಬಗ್ಗೆ ತಿರಸ್ಕಾರ ತೋರಿಸಬೇಕಾದೆ.

ಖೊಮೈನಿಯ ಇಸ್ಲಾಂ ವ್ಯವಸ್ಥೆ ಭಾರತದ
ಈಗಿನ ಸ್ಥಿತಿಗಿಂತ ನೂರು ಪಟ್ಟು ಕ್ರೂರವಾಗಿರುವ
ಗೊತ್ತಿಲ್ಲವೆ? ಭಾರತ ಕಾನೂನು, ರಾಜ್ಯಾಂ
ಪುಸ್ತಕಗಳಲ್ಲಾದರೂ ಒಂದು ಲಿಬರಲ್ ವ್ಯ
ಯನ್ನು ಒಪ್ಪುತ್ತದೆ. ಖೊಮೈನಿಯ ಇಸ
ವ್ಯವಸ್ಥೆ ಪುಸ್ತಕದಲ್ಲಿ ಕೂಡ ಅದನ್ನು ಒಪ್ಪಲಾರ
ಸೆಕ್ಯುಲರ್ ಎನ್ನುವ ಮಾತಂತೂ ದೂರವೇ ಉ
ಯಿತು. ಇರಾನಿನ ನೀಗ್ರೋ ಮುಸ್ಲಿಮ
ಸ್ಥಿತಿ ಅಮೇರಿಕದ ನೀಗ್ರೋಗಳ ಸ್ಥಿತಿಗಿ
ಹೀನವಾಗಿದೆ. ಭಾರತದಲ್ಲಿ ಮುಸ್ಲಿಮ
ಮತಾಂತರಗೊಂಡ ಹರಿಜನರನ್ನು ಸಮಾನತೆಯಿ
ನೋಡಬಹುದು. ಅದು ಭಾರತದಲ್ಲಿ ಸ್ವಲ್ಪವಾದ
ಇರುವ ಲಿಬರಲ್ ಕ್ಯಾರೆಕ್ಟರ್‌ನಿಂದಾಗಿ ಮಾ
ಮುಸ್ಲಿಮರ ಸಂಖ್ಯೆ ಹೆಚ್ಚಾದಂತೆ ಇದು ಭಾ
ವಾಗಿ ಉಳಿಯುವುದಿಲ್ಲ. ಅರಬ್ ರಾಷ್ಟ್ರದ ಕಾಲೊ
ಯಾಗಿ ಖೊಮೈನಿಯ ವ್ಯವಸ್ಥೆಯನ್ನು ಒಪ್ಪ
ಸ್ಥಿತಿ ಭಾರತಕ್ಕೆ ಬರುತ್ತದೆ. ಆಗ ಇಲ್ಲಿನ ಮೇ
ವರ್ಗದವರೂ ಮುಸ್ಲಿಮರಾಗುತ್ತಾರೆ. ಖೊಮೆ
ಯ ವ್ಯವಸ್ಥೆಗೆ ಹರಿಜನ ಮುಸ್ಲಿಮನಿಗಿಂತ, ಬಾಹ
ಮುಸ್ಲಿಮ, ಕ್ಷತಿಯ ಮುಸ್ಲಿಮ ಹೆಚ್ಚು ಪ್ರಿಯರಾ
ತ್ತಾರೆ. ದಲಿತರು ಸಂಪೂರ್ಣವಾಗಿ ಅನಾಥರಾ
ತ್ತಾರೆ. ಇದೆಲ್ಲ ಇನ್ನು ಐವತ್ತು ವರ್ಷದ ನಂತ
ಮಾತಿರಬಹುದು. ಆದರೆ ಇದೆಲ್ಲ ಇಷ್ಟೇ *fanai*
ದಾರಿಯಲ್ಲಿ ನಡೆಯುತ್ತದೆ ಎನ್ನುವುದು ಮಾತ್ರ ಸ
ಆದ್ದರಿಂದ ಮತಾಂತರದಂಥ ಸ್ವಂತ ಗೋರಿಗಿಂತ'
ತಸ್ಥಾನ'ಕ್ಕಾಗಿ ಹೋರಾಟ ಹೆಚ್ಚು ಅರ್ಥಪೂರ್ಣ

ಟಿ. ಎನ್. ಸೀತಾರಾವ್, ಗೌರಿಬಿದನೂ

ಜಾತಿಯ ಮಾನಸಿಕವಾಗಿ ಹಿಂದುಳಿದ ಜನರ
ತಮ್ಮ ನಾಯಿಯಂತೆ, ಇಲ್ಲ ಆದಕ್ಕಿಂತ ಸ್ವ
ಉತ್ತಮವಾಗಿ ಕಾಣುತ್ತಿದ್ದದು ಇನ್ನೂ ನೆನ
ಅಂದ ಮೇಲೆ ಪಂಚಮ ಹೇಗೆ ಬೆಳೆಯುತ್ತಿದ್ದಾ
ಬದುಕುತಿದ್ದಾನೆ ಎಂಬುದನ್ನು ಯೋಚಿಸಿದ
ನನಗೆ ದಾರಿಕಾಣದಾಗುತ್ತದೆ. ಪ್ರೀತಿ, ಪ್ರೇ
ಮರುಕ ಎಂಬ ಪದಗಳು ನೀಚರ ಕೈಲಿ ಸಿ
ತಮ್ಮ ಸ್ವಂತಿಕೆಯನ್ನೆ ಕಳೆದುಕೊಂಡಿವೆ.

ಕೆ. ಎಸ್. ಗರುಬಸವೇಗೌಡ,
ಮೈಸೂರು

ಪು

ಮುಚ್ಚಿ ಹೋಗಿರುವ ಮುನಿಯಪ್ಪನವರ ಕಗ್ಗೊಲೆ!

ಬೆಂಗಳೂರು ಉತ್ತರ ತಾಲ್ಲೂಕು ಹೆಸರಘಟ್ಟ
ೀಬಳಿ ಸುರಧೇನುಪುರ ಗ್ರಾಮದಲ್ಲಿ ದಲಿತ
ಾಂಗಕ್ಕೆ ಸೇರಿದ ಪೂಜಪ್ಪನ ಮಗ ಮುನಿ
ಪ್ಪ ವಿದ್ಯಾವಂತನಾಗಿದ್ದನಲ್ಲದೆ, ಸರ್ಕಾರ
ವ ದಲಿತ ಜನಾಂಗದವರಿಗೆ ಬರುವ ಎಲ್ಲಾ
ಲತ್ತುಗಳನ್ನು ಕಲ್ಪಿಸಿಕೊಡುವ–ಸವರ್ಣೀಯ
ದೂಗಳಿಂದ ದಲಿತ ಜನಾಂಗದವರಿಗೆ ಆಗುವ
ವುದೇ ರೀತಿಯ ಅನ್ಯಾಯಗಳನ್ನು ಪ್ರತಿ
ಸಿ ಸರಿಪಡಿಸುವ ವ್ಯವಹಾರಿಕ ಚತುರನೂ
ದ್ದನು. ಸವರ್ಣೀಯ ಹಿಂದೂಗಳಿಂದ ದಲಿತ
ಆಗುವ ಅನ್ಯಾಯವನ್ನು ಪ್ರತಿಭಟಿಸುತ್ತಲೇ;
ಪ್ರತಿಭಟನೆಯಲ್ಲಿ ಯಶಸ್ವಿಯಾದ ಮುನಿ
ಪ್ಪ ತನಗರಿವಿಲ್ಲದಂತೆಯೇ ದಲಿತರ ಮುಂದಾ
. ಇವನ ಪ್ರತಿಭಟನೆಯ ಕೆಲವು ಸಂಗತಿ
ನ್ನು ನಾವು ಗಮನಿಸಬೇಕು.
ಾರಣ ಹೀಗಿವೆ:
) ಗ್ರಾಮದ ಛೇರ್‌ಮನ್ ಚಿಕ್ಕಮುತ್ತ
ಪ್ಪ- ವೈಸ್ ಛೇರ್‌ಮನ್ ಮುನಿಕೃಷ್ಣ–
ಾಯಿತಿ ಕಾರ್ಯದರ್ಶಿ ಬೋರಯ್ಯ ಇವರು
ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿಯಿಂದ
ಗಾಗಿ ಕಾಳು ಯೋಜನೆಯಲ್ಲಿ ೮೦
ಾಲ್ ಅಕ್ಕಿಯನ್ನು ತೆಗೆದುಕೊಂಡು ಬಂದು
ಕೂಲಿಯಾಳುಗಳಿಗೆ ಹಂಚಿರುವುದಿಲ್ಲ. ಇದನ್ನು
ನಿಯಪ್ಪ ಜಾಗ್ರತ ಆಯೋಗದ ಮುಂದೆ ಅರ್ಜಿ
ತನಿಖೆಯಾಗುವಂತೆ ಮಾಡಿದನು. (೨)
ತಾಯಿಯ ಹೆಸರಿನಲ್ಲಿದ್ದ ಶ್ರೀರಾಮನಹಳ್ಳಿ
ಕ್ಕೆ ಸೇರಿದ ೪ ಎಕರೆ ಜಮೀನನ್ನು ತನ್ನದು
ಹೇಳಿ ಅಕ್ರಮವಾಗಿ ಪಟೇಲ್ ವೆಂಕಟ
ಪ್ಪ, ಮತ್ತು ಈತನ ತಮ್ಮ ಅಂಜನಪ್ಪ
ಕೊಂಡು ಬೆಂಗಳೂರು ವಾಸಿಯಾದ ವೆಂಕ
ಎಂಬುವರಿಗೆ ಹತ್ತು ಸಾವಿರ ರೂಪಾಯಿ
ಮಾರಿದರು. ಆಗ ಈ ಜಮೀನು ನನ್ನ
ಯದಾದುದರಿಂದ ಸಹಜವಾಗಿ ಜಮೀನು
ಧವಾಗಿ ನೀವು ತೆಗೆದುಕೊಂಡಿರುವ ಹತ್ತು
ರೂಪಾಯಿ ನನಗೆ ಸೇರಬೇಕೆಂದು ಒತ್ತಾ
ನು. (೩) ಈತನ ಮಾವನಾದ ಮುನಿ
ಪ್ಪ ಊರಿನ ಮುಂದೆ ಶಾನಭೋಗ ಸುಬ್ಬ
ಪ್ಪ ಎಂಬುವರ ಜಮೀನನ್ನು ಕಳೆದ ೨೦
ಗಳಿಂದಲೂ ಸಾಗುವಳಿ ಮಾಡುತ್ತಾ ಬಂದಿ
ಈ ಜಮೀನನ್ನು ಸುರಧೇನುಪುರದವರೇ
ಅಶ್ವತ್ಥಪ್ಪ ಎಂಬುವರು ಹತ್ತು ಸಾವಿರ
ಯಿಗಳ ಕೊಟ್ಟು ಕ್ರಯ ಮಾಡಿಸಿಕೊಂಡ
ಸಾಗುವಳಿಗಾರರನ್ನು ಜಮೀನು ಬಿಡುವಂತೆ
ಯಿಸಿದಾಗ ಮುನಿಯಪ್ಪ ಸಾಗುವಳಿ



ದಾರನ ಪರವಾಗಿ ನಿಂತು ಭೂ ನ್ಯಾಯ ಮಂಡಲಿಗೆ ದೂರು ಸಲ್ಲಿಸುತ್ತಾನೆ. (೪) ಇದೇ ಊರಿನ ದಲಿತ ಜನಾಂಗದ ಕದಿರಪ್ಪ ತನಗೆ ಬಂದ ಸೈಟಿನಲ್ಲಿ ಜನತಾ ಸ್ಕೀಮಿನ ಮನೆಕಟ್ಟಿದನು ಆಗ ಯಾವುಯಾವುದೋ ಕಾರಣಗಳನ್ನು ಹೂಡಿ ಮೇಲೆ ತಿಳಿಸಲಾದ ಛೇರ್‌ಮನ್, ವೈಸ್‌ಛೇರ್‌ಮನ್ ಮತ್ತವರ ಅನುಯಾಯಿಗಳು ಕದಿರಪ್ಪನ ಮನೆಯವರು ಕಿತ್ತು ಬೀಸಾಡಿದರು. ಆಗ ಇವರ ವಿರುದ್ಧ ಮುನಿಯಪ್ಪ ಪೋಲೀಸ್ ಕೇಸ್ ಕೊಡುತ್ತಾನೆ. (೫) ಸುರಧೇನುಪುರದ ಪಶ್ಚಿಮ ಭಾಗದಲ್ಲಿ ದಲಿತ ಜನಾಂಗದವರಿಗೆ ೧೨ ಎಕರೆ ದರಖಾಸ್ತು ಜಮೀನು ಮೀಸಲಾಗಿತ್ತು. ಇದನ್ನು ಛೇರ್‌ಮನ್ ಹಾಗೂ ಪುಢಾರಿ ಅಶ್ವತ್ಥಪ್ಪ ತಮ್ಮ ಸಂಬಂಧಿಗಳಿಗೆ ಮಾಡಿಸಿದರು. ಇದನ್ನು ತಿಳಿದ ಮುನಿಯಪ್ಪ ಹೋರಾಡಿ ಮತ್ತೆ ದಲಿತರಿಗೇ ಈ ಜಮೀನು ಸಿಗುವಂತೆ ಮಾಡುತ್ತಾನೆ. (೬) ಇದೇ ಊರಿನ ದಿವಂಗತ ವೈ. ಎಸ್. ಶಾಮರಾಯರ ಮಕ್ಕಳಿಗೆ ಮತ್ತು ಮೊಮ್ಮಕ್ಕಳಿಗೆ ಸೇರಿದ ಜಮೀನನ್ನು ಸುಮಾರು ೨೦ ವರ್ಷಗಳಿಂದಲೂ ಸುಬ್ಬಯ್ಯನಮಗ ಕೃಷ್ಣ, ಹುಣಸೂರು ನರಸಿಂಹ, ಮುನಿಚನ್ನಪ್ಪನಮಗ ಓಬಳಪ್ಪ, ಪೂಜಪ್ಪನಮಗ ನಾರಾಯಣಪ್ಪ, ನಾರಿಗನ ಮಗ ಚಿಕ್ಕಮುನಿಶಾಮಪ್ಪ. ಪೂಜಪ್ಪನಮಗ ಮುನಿಯಪ್ಪನವರು ಸಾಗುವಳಿಯನ್ನು ಮಾಡುತ್ತಿದ್ದು ಭೂನ್ಯಾಯ ಮಂಡಲಿಗೆ ಅರ್ಜಿಗಳನ್ನು ಸಲ್ಲಿಸಿದ್ದರು. ಆದರೆ ಈಜಮೀನನ್ನು ಸುರಧೇನಪುರದ ಬಲಿಷ್ಠರಾದ ದೊಡಣ್ಣನಮಗ ಪಟಾಲಪ್ಪ, ಮುನಿಕೃಷ್ಣಪ್ಪನಮಗ ಚಿಕ್ಕ ಹನುಮಂತರಾಯಪ್ಪ, ಅಂಜಪ್ಪನಮಗ ದೊಡ್ಡ ಹನಮಂತರಾಯಪ್ಪ– ಮುತಾದವರು ದಿವಂಗತ ಶಾಮರಾಯರ ಹೆಂಡತಿ ರಾಜಮ್ಮ, ಮೊಮ್ಮಗ

ದೇವಯ್ಯ ಹರವೆ

ನಾದ ರಾಜಶೇಖರ, ಮಕ್ಕಳಾದ ಲಕ್ಷ್ಮಣರಾವ್, ಸುಬ್ಬಣ್ಣ–ಲಿಂಗಣ್ಣ ಇವರುಗಳಿಂದ ಕ್ರಯಕ್ಕೆ ಕೊಂಡರು. ಇದನ್ನು ಲಖಿತದ ಮೂಲಕ ಎಲ್ಲಾ ಅಧಿಕಾರಿಗಳ ಮುಂದೂ ಮುನಿಯಪ್ಪ ಸ್ಪಷ್ಟಪಡಿಸಲಾಗಿ ಭೂನ್ಯಾಯಮಂಡಲಿಯ ಮುಂದೆ ದಲಿತ ಜನಾಂಗದ ಸಾಗುವಳಿಯ ಸಮಸ್ಯೆ ವಿಚಾರಣೆಗೆ ಬಂದಿತು. (೭) ಇದಕ್ಕಿಂತ ಮೊದಲು ಶಾಮರಾಯರ ಮೊಮ್ಮಗ ರಾಜಶೇಖರಪ್ಪ ಮತ್ತು ಇವನ ತಾಯಿ ಇದೇ ಊರಿನ ಚಿಕ್ಕಸುಬ್ಬಯ್ಯನ ಮಗ ಮುನಿಕೃಷ್ಣಪ್ಪನಿಗೆ ಸರ್ವೆನಂ.೩೦|೨ ರಲ್ಲಿ ೪ಎಕರೆ ಜಮೀನನ್ನು ಮಾರಾಟ ಮಾಡಿದ್ದರು. ಈ ಜಮೀನನ್ನು ಮುನಿಯಪ್ಪನಮಗ ಓಬಳಪ್ಪನು ಸುಮಾರು ೨೦ ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದು ಭೂನ್ಯಾಯ ಮಂಡಲಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದ. ಈ ಸಂಬಧದಲ್ಲಿ ರಾಜಶೇಖರಪ್ಪ ಓಬಳಪ್ಪನನ್ನು ನೀನು ಜಮೀನು ಬಿಟ್ಟು ಹೋಗದಿದ್ದರೆ ಕೊಲೆ ಮಾಡುವುದಾಗಿ ಹೆದರಿಸಿದ್ದರು. ಒಂದು ದಿವಸ ರಾಜಶೇಖರಪ್ಪ ದನಗಳನ್ನು ಬಿಟ್ಟು ಓಬಳಪ್ಪ ಬೆಳೆದಿದ್ದ ಬೆಳೆಯನ್ನು ಮೇಯಿಸುತ್ತಿರಲು- ಅದನ್ನು ಪ್ರತಿಭಟಿಸಲು ಓಬಳಪ್ಪನು ಬಂದಾಗ ಚೈನಿನಿಂದ ಈತನ ತಲೆಯೊಡೆಯುತ್ತಾರೆ. ಓಬಳಪ್ಪನ ತಲೆಯಿಂದ ರಕ್ತ ಸುರಿಯುತ್ತಿದ್ದಂತೆ ಅವನನ್ನು ಕರೆದು ಕೊಂಡು ಹೋಗಿ ಮುನಿಯಪ್ಪ ದೂರು ಸಲ್ಲಿಸಿದ.

ಇಂಥ ಹಲವಾರು ಪ್ರಕರಣಗಳಲ್ಲಿ ಹೋರಾಡಿದ ಮುನಿಯಪ್ಪ–ಹಿಂದುಗಳ ವೈರತ್ವವನ್ನು ಕಟ್ಟಿಕೊಳ್ಳಬೇಕಾಯಿತು. ಫಲವಾಗಿ ಸುರಧೇನುಪುರದ ಛೇರ್‌ಮನ್ ಚಿಕ್ಕಮುತ್ತುರಾಯಪ್ಪ,

(ಮುಂದಿನ ಪುಟಕ್ಕೆ)

ಮುನಿಯಪ್ಪ ಕೊಲೆ: ಹೊಣೆಯಾರು?

(3ನೆ ಪುಟದಿಂದ)

ವೈಸ್‌ಛೇರ್‌ಮನ್ ಮುನಿಕೃಷ್ಣಪ್ಪ, ಪಂಚಾಯಿತಿ ಕಾರ್ಯದರ್ಶಿ ಬೋರಯ್ಯ, ಪಟೇಲ್ ವೆಂಕಟರಮಣಪ್ಪ ಮತ್ತು ಈತನ ತಮ್ಮ ಅಂಜನಪ್ಪ, ಅಶ್ವತ್ಥಪ್ಪ, ದೊಡ್ಡಣ್ಣನವರ ಮಗ ಪಟಾಲಪ್ಪ, ಮುನಿಕೃಷ್ಣಪ್ಪನ ಮಗ ಚಿಕ್ಕ ಹನುಮಂತರಾಯಪ್ಪ, ಅಂಜನಪ್ಪನ ಮಗ ದೊಡ್ಡ ಹನುಮಂತರಾಯಪ್ಪ, ಶಾಮರಾಯರ ಮಕ್ಕಳೂ ಹಾಗೂ ಮೊಮ್ಮಗ ರಾಜಶೇಖರಪ್ಪ—ಇವರೆಲ್ಲರೂ ಮುನಿಯಪ್ಪನ ಕೊಲೆಗೆ ಕಾರಣರಾಗಿದ್ದಾರೆ.

ಕೊಲೆಯಲ್ಲಿ ಕೊನೆ ಇವರೆಲ್ಲ ಸೇರಿ ಮುನಿಯಪ್ಪನ ಕೊಲೆ ಮಾಡಲು ಒಂದು ದೊಡ್ಡ ಜಾಲವನ್ನೇ ನಿರ್ಮಿಸಿದ್ದರು ಮತ್ತು ಬಲಿಷ್ಠರ ಒಂದು ಗುಂಪು ಕಟ್ಟಿ ಮುನಿಯಪ್ಪ ಎಲ್ಲಿ ಸಿಕ್ಕಿದರೂ ಅವನನ್ನು ಮುಗಿಸಿಬಿಡಬೇಕೆಂದು ತೀರ್ಮಾನ ತೆಗೆದುಕೊಂಡರು. ವೈಸ್‌ಛೇರ್‌ಮನ್ ಮುನಿಕೃಷ್ಣಪ್ಪನು ಅಂಜನಪ್ಪ, ಯಲ್ಲಪ್ಪ, ಮುನಿಯಪ್ಪ ಇವರುಗಳಿಗೆ ಮೂರು ಸಾವಿರ ರೂಪಾಯಿಗಳನ್ನು ಕೊಡಿಸಿ 'ಮುನಿಯಪ್ಪನಿಗೆ ಚೆನ್ನಾಗಿ ಕುಡಿಸಿ ಅರ್ಧ ಜೀವ ಇರುವಾಗ ನಮಗೆ ತಂದು ಒಪ್ಪಿಸಿರಿ' ಎಂದು ತಾಕೀತು ಮಾಡಿ ಕಳಿಸಿದರು. ಮುನಿಯಪ್ಪನ ಚಲನವಲನ ಗಮನಿಸಿದ ಈ ಮೂರುಜನ, ಮುನಿಯಪ್ಪನನ್ನು ೧೬-೧೧-೮೦ ರಂದು 'ಬಾ ಬೆಂಗಳೂರಿಗೆ ಹೋಗೋಣ ಮೀಟಿಂಗ್ ಇದೆಯಂತೆ' ಎಂದು ಕರೆದುಕೊಂಡು ಹೋದರು. ಒಂದು ಹೋಟೆಲ್‌ನಲ್ಲಿ ವೈಸ್‌ಛೇರ್‌ಮನ್ ಮುನಿಕೃಷ್ಣಪ್ಪ ಮುನಿಯಪ್ಪನನ್ನು ಸಂಧಿಸಿ ಕೈಗೆ ೫ ಸಾವಿರ ಕೊಟ್ಟು—'ಹರಿಜನರು ಭೂನ್ಯಾಯ ಮಂಡಲಿಗೆ ಸಲ್ಲಿಸಿರುವ ಅರ್ಜಿಗಳನ್ನು ಹಿಂದಕ್ಕೆ ತೆಗೆಸಿ ರಾಜಿ ಮಾಡಿಸು. ಇನ್ನು ಮುಂದೆ ಹೇಳಿದಂತೆ ಕೇಳಿಕೊಂಡು ಗಂಭೀರವಾಗಿದ್ದರೆ ನಿನಗೆ ಕ್ಷೇಮವೆಂದು ಹೊರಟುಹೋದರು. ಮತ್ತೆ ಅಂಜನಪ್ಪ, ಯಲ್ಲಪ್ಪ, ಮುನಿಯಪ್ಪ—ಇವರುಗಳು ಮುನಿಯಪ್ಪನಿಗೆ ಕುಡಿಸಿ ತಿನ್ನಿಸಿ, ಮುಂದುವರೆದು ರಾತ್ರಿ ೯ ಗಂಟೆಗೆ ರಾಜನ್ ಕುಂಟೆಯ ಬಳಿಗೆ ಕರೆದುಕೊಂಡು ಹೋಗಿ ಸಾರಾಯಿಗೆ ಅಫೀಮು ಬೆರೆಸಿ ಕುಡಿಸಿದರು. ಸುರಧೇನುಪುರದ ಕಡೆಗೆ ನಡೆಸಿಕೊಂಡೇ ಬರುತ್ತಾ ಕರಿಕಲ್ಲು ದಿನ್ನೆಯ ಹತ್ತಿರಕ್ಕೆ ಬಂದಾಗ, ಮುನಿಕೃಷ್ಣಪ್ಪ ತಾವಾಗಲೇ ಸಿದ್ಧಮಾಡಿದ್ದ ಗ್ಯಾಂಗಿನ ಜೊತೆ ಬಂದರು. ಕ್ರೂರ ಆಯುಧಗಳನ್ನು ಬಳಸಿ ಕೊಲೆ ಮಾಡಿಸಿ ಮುನಿಯಪ್ಪನ ಬಳಿಯಲ್ಲೇ ಇದ್ದ ಟವಲ್ಲು ಮತ್ತು ಶಾಲುವಿನಿಂದ ಕೈಕಾಲುಗಳನ್ನು ಕಟ್ಟಿ ಮುನಿನಂಜಪ್ಪನ ಮಂಟಪದ ಪಶ್ಚಿಮಭಾಗದಲ್ಲಿರುವ ಬಾವಿಗೆ ಎಸೆದರು.

ಹಣವಂತರ ಅಟ್ಟಹಾಸ: ೨೦-೧೧-೧೯೮೦ ರಂದು ಬಾವಿಯಲ್ಲಿ ತೇಲುತ್ತಿದ್ದ ಹೆಣವನ್ನು ಕದಿರಪ್ಪನೆಂಬುವನು ನೋಡಿದನು. ಪೋಲೀಸರಿಗೆ ದೂರು ಮುಟ್ಟಿತು. ಆಗ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಬಿ. ಕೆ. ಮುನಿಯಪ್ಪ ಎಂಬುವರು ಬಂದು ತನಿಖೆಯೆಂಬ ನಾಟಕ ಆಡಿದರು. ಇಲ್ಲಿ ಸುರಧೇನುಪುರದ ಛೇರ್‌ಮನ್ ಚಿಕ್ಕಮುತ್ತುರಾಯಪ್ಪ ಮೊದಲನೆಯ ಅಪರಾಧಿ ಎಂದೂ; ವೈಸ್ ಛೇರ್‌ಮನ್ ಮುನಿಕೃಷ್ಣಪ್ಪ ಎರಡನೆಯ ಅಪರಾಧಿ ಎಂತಲೂ; ಮೂರನೆಯ ಮತ್ತು ನಾಲ್ಕನೆಯ ಅಪರಾಧಿಗಳು ಚಿಕ್ಕಮುನಿಯಪ್ಪ ಮತ್ತು ಬೋರಯ್ಯ ಎಂಬುವರೆಂದೂ ತಿಳಿಯಿತು. ಇವರೆಲ್ಲರೂ ಬೆಂಗಳೂರಿನಲ್ಲೇ ತಪ್ಪಿಸಿಕೊಂಡು ಅಲೆಯುತ್ತಿದ್ದರು. ಅಪರಾಧಿಯಾದ ಮುನಿಕೃಷ್ಣಪ್ಪ ೧೫-೧೨-೧೯೮೦ ರಂದು ನಿರೀಕ್ಷಣಾ ಜಾಮೀನು ಪಡೆದರು. ಉಳಿದ ಮೂರು ಜನ ಅಪರಾಧಿಗಳನ್ನು ೧೫-೧೨-೧೯೮೦ ರಂದು ನಿರೀಕ್ಷಣಾ ಜಾಮೀನಿನಮೇಲೆ ಬೆಂಗಳೂರಿನ ಚೀಫ್ ಜುಡಿಷಿಯಲ್ ಮಾಜಿಸ್ಟ್ರೇಟರು ಬಿಡುವಂತೆ ಮಾಡಿದರು. ಇಷ್ಟಾದ ಮೇಲೆ ಬೆಂಗಳೂರಿನ ನಂದಿ ಬೆಟ್ಟಕ್ಕೆ ಹಲವಾರು ರಾಜಕೀಯ ವ್ಯಕ್ತಿಗಳನ್ನು ಆಹ್ವಾನಿಸಿ ಇವರ ಛತ್ರಿಗಳ ಅಡಿಯಲ್ಲಿ ಮುಖ್ಯ ಪೋಲೀಸ್ ಅಧಿಕಾರಿಗಳಿಗೆ ೫ ಸಾವಿರಕ್ಕಿಂತಲೂ ಹೆಚ್ಚು ಕೊಟ್ಟು ತನಿಖೆಯಾಗದಂತೆ ಇಡೀ ಪ್ರಕರಣವನ್ನೇ ಮುಚ್ಚುಹಾಕುವ ಕೆಲಸ ಮಾಡಿದ್ದರೆಂದು ವದಂತಿ ಇದೆ.

೧೫-೧೨-೧೯೮೦ ರಂದು ಎಲ್ಲರಿಗೂ ಜಾಮೀನು ಸಿಕ್ಕಮೇಲೆ—ನಾಲ್ಕು ಜನ ಅಪರಾಧಿಗಳಿಗೂ ಹೂವಿನಹಾರಗಳನ್ನು ಹಾಕಿ ಸುರಧೇನು ಪುರದ ಒಂದು ಗುಂಪು ಮೆರವಣಿಗೆ ಮಾಡಿತು. ಹರಿಜನರಿಗೆ ಧಿಕ್ಕಾರ, ಮುನಿಯಪ್ಪನಿಗೆ ಧಿಕ್ಕಾರ, ನಾವು ಹಣವಂತರು, ನಾವು ಜನವಂದಿಗರು, ಎಷ್ಟು ಜನರನ್ನು ಖೂನಿ ಮಾಡಿದರೂ ನಮ್ಮನ್ನು ಎದುರಿಸಲು ಸಾಧ್ಯವಿಲ್ಲ. ಛೇರ್‌ಮನ್ ಚಿಕ್ಕಮುತ್ತುರಾಯಪ್ಪಗೆ ಜೈ, ವೈಸ್‌ಛೇರ್‌ಮನ್ ಮುನಿಕೃಷ್ಣಪ್ಪನಿಗೆ ಜೈ " ಎಂದು ಕೂಗುತ್ತಾ ಮುನಿಯಪ್ಪನ ಮನೆಗೆ ಹೋಗಿ ಅವನಪರವಾಗಿದ್ದ ಜನರನ್ನು ಬೆದರಿಸಿದರು.

ನ್ಯಾಯಕ್ಕಾಗಿ ಅಲೆಯುತ್ತಿರುವ: ನಾರಾಯಣಪ್ಪ ಮುನಿಯಪ್ಪನ ತಮ್ಮ. ಕಳೆದ ೯ ತಿಂಗಳಿಂದಲೂ ಈ ಕೊಲೆಗೆ ಸಂಬಂಧಪಟ್ಟ ವಿಷಯವನ್ನು ಟೈಪ್ ಮಾಡಿಸಿ—ಮುಖ್ಯಮಂ[...] ಗಳು, ಡಿಐಜಿ, ಎಸ್‌ಪಿ, ಸರ್ಕಲ್ ಇನ್ಸ್‌ಪೆಕ್ಟ[...] ಮುಂತಾದವರೆಲ್ಲರಿಗೂ ಕೊಡುತ್ತಲೇ ಬಂದಿ[...]ರು. ಆದರೆ ಯಾವುದೇ ರೀತಿಯ ನ್ಯಾಯ ಸಿಕ್ಕಿ[...]ವೆಂಬುದು ಈ ದೇಶದ ಷಂಡ ಆಡಳಿತಗಾರರ ಸ್ಥಿ[...]ಯನ್ನು ಸೂಚಿಸುವುದು.

ಕುಡಿವ ನೀರ ಕೆರೆ ಒಡೆದು .....

(ಮೊದಲ ಪುಟದಿಂದ)

ಒಂದು ದಿನ ಮದ್ಯಾಹ್ನ ದಲಿತ ಹೆಂಗಸರಿಬ್ಬ[...] ಕೆರೆ ಏರಿ ಮೇಲೆ ಬರುತ್ತಿದ್ದಾಗ, ಸುಬ್ಬೇಗೌಡನ[...] ದನಗಳನ್ನು ಮೇಯಿಸುತ್ತಾ ಇದ್ದನು. ತಿವಿಯಲ[...] ಬಂದ ದನಗಳನ್ನು ಕಂಡ ಹೆಂಗಸರು—"[...] ದನಗಳ ಅತ್ತಗೆ ಅಟ್ರಪ್ಪ ತಿವಿತವೆ" ಎಂದರು[...] ಸುಬ್ಬೇಗೌಡನು ಕೆರಳಿ ಹೀಗೆಂದ ; "ಏನ್ರಮ್ಮ[...] ಪೊತ್ತು ಎಲ್ರು ಮೀಸೆ ಕಟ್ಗಂಡು ಬಂದಿದ್ರಿ ಕೆ[...] ಬುಡಿಸ್ಕೊಳ್ಳಕೆ ಅದೆಂಗೆ ಬುಡಸ್ತೀರಿ ನ[...] ನೋಡುತ್ತಿನಿ".

ಹೆಂಗಸರು : ವಸಿ ಮರ್‍ಯಾದೆ ಕೊಟ್ಟು ಮಾತ[...] ಡ್ರಿಸ್ವಾಮಿ"

ಸುಬ್ಬೇಗೌಡ : ಎಲಾ ಬೇವಾರ್ಸಿ ಮುಂಡೇ[...] ಹೊಲೆ ಬಡ್ಡೀಮಕ್ಕಳ ನಿಮಗೆ ಮರ್‍ಯಾದೆ ಬೇ[...] ಕೊಡಬೇಕ? ನಿಮ್ಗೆಲ್ಲ ದರ್ಗಾ (ರತ್ನ ಪುರಿ)ದ[...] ಮಾಡ್ದಂಗೆ ಮಾಡ್ಬೇಕು, ದಿನೇಚ್ಚು ಕಡ್ಮೆ ಅಂ[...] ಆಯ್ತದೆ" ಇಷ್ಟೆ ಅಲ್ಲ, ಆ ಬಡಪಾಯಿ ಹೆಂಗ[...]ರನ್ನು ಚೆನ್ನಾಗಿ ಥಳಿಸಿದನು.

ನಂತರ A.C.ಗೆ ದೂರಿತ್ತರು, ಆದ್ರೆ ಖುದ್ದು[...] ಎ.ಸಿ.ಸಿಗಲಿಲ್ಲ. ಈ ದಲಿತರ ಮೇಲೆ ದ್ವೇಷ ಸಾ[...]ಸುತ್ತಿದ್ದ ದಲಿತ ವಿರೋಧಿ ತಹಸೀಲ್‌ದಾರ್[...] ಕರುಂಬಯ್ಯನವರು ಭೂಮಾಲೀಕರ ಹಣ ಮತ್ತು[...] ಪ್ರಭಾವಕ್ಕೊಳಗಾಗಿ ಕೆರೆಯನ್ನು ಬಿಡಿಸಿಕೊಡ[...]ವುದರ ಬದಲು ದಲಿತರು ಕಳೆದ ೨೦ ವರ್ಷಗಳಿಂ[...] ಸಾಗುವಳಿ ಮಾಡುತ್ತಿದ್ದ ಜಮೀನನ್ನು ಬಿಡ[...]ವಂತೆಯೂ ಆ ಭೂಮಿ ಗಿರಿಜನರಿಗೆ ಸೇರಿದ್ದೆಂದೂ[...] ತಪ್ಪಿದರೆ ನಿಮ್ಮನ್ನೆಲ್ಲ ಜೈಲಿಗೆ ತುಂಬಿಸುತ್ತೆ[...]ನೆಂದೂ ಬೆದರಿಸಿ ನೋಟೀಸು ಕೊಟ್ಟಿರುವರು.

ನಿಜ ಸಂಗತಿಯೆಂದರೆ ಗಿರಿಜನರ ಜಮೀನನ್ನು[...] ಸುತ್ತಮುತ್ತಲ ಸುಬ್ಬೇಗೌಡನಂಥ ಭೂಮಾಲಿ[...]ಕರೇ ಕಬಳಿಸಿದ್ದು, ಈ ವಿಷಯ ಎಲ್ಲಾ ಹಂತದ[...] ಅಧಿಕಾರಿಗಳಿಗೂ ತಿಳಿದಿದ್ದರೂ ಸಹಾ ದಲಿತರಿಗ[...] ಅನ್ಯಾಯವಾಗಿ ಕಿರುಕುಳ ಕೊಡುತ್ತಿರುವರು[...] ಇಷ್ಟೆಲ್ಲ ಅನ್ಯಾಯಗಳನ್ನು ಮಾಡಿರುವ ಸದ[...] ಕರುಂಬಯ್ಯನವರಿಗೆ ಪ್ರಮೋಷನ್ ಸಿಕ್ಕಿದ[...]ಯಂತೆ. ಎಲ್ಲಾ ಅಧಿಕಾರಿಗಳ ಮುಂದೆ ದಿನಾ ಅ[...]ದಾಡುತ್ತಿರುವ ದಲಿತರು ದೇಶ ಬಿಟ್ಟು ಹೋಗ[...] ಬೇಕೊ ? ಮತಾಂತರ ಆಗಬೇಕೊ ?

'ಪವಿತ್ರ' ಹಿಂದೂ ಧರ್ಮದ ಒಳಗೆ

ಚಂಡಾಲರು ಮನುಷ್ಯರಲ್ಲಿ ಅಧಮರು ಶ್ಲೋಕ : ೩೯) ರುದ್ರಭೂಮಿಯಲ್ಲಿ ಇವರ ವಾಸ (ಶ್ಲೋಕ : ೫೦-೫೧) ಬ್ರಾಹ್ಮಣರಿಗೆಹಸುಗಳನ್ನೂ, ಕ್ಷತ್ರಿಯರಿಗೆ ರಾಜ್ಯವನ್ನೂ, ವೈಶ್ಯರಿಗೆ ಭೂಮಿ ಕಾಣಿಕೆಗಳನ್ನೂ ಸ್ವತ್ತಾಗಿ ಅನುಭವಿಸುವ ಅಧಿಕಾರ ಉಂಟು. ಆದರೆ ಚಂಡಾಲರು ನಾಯಿ ಅಥವಾ ಕತ್ತೆಗಳನ್ನು ಆಸ್ತಿಯಾಗಿ ಪಡೆಯಬಹುದು. ಹೆಣದ ಮೇಲಿನ ಬಟ್ಟೆಗಳನ್ನು ಚಂಡಾಲರು ಧರಿಸಬೇಕು. ಒಡೆದ ಮಡಕೆಗಳು ಇವರ ಪಾತ್ರೆಗಳು ಕಬ್ಬಿಣದ ಬಳೆಗಳನ್ನು ಆಭರಣಗಳಾಗಿ ತೊಡಬಹುದು. ಒಂದು ಊರಿನಲ್ಲಿ ಇವರು ನೆಲೆಯಾಗಿ ನಿಲ್ಲಬಾರದು ಮತ್ತು ಆಸ್ತಿ ಸಂಚಯ ಮಾಡಬಾರದು (ಶ್ಲೋಕ : ೫೪) ಸೇವಕರ ಮೂಲಕ ಒಡೆದು ಬೇಡವಾದ ಪಾತ್ರೆಗಳಲ್ಲಿ ಚಂಡಾಲರಿಗೆ ಆಹಾರವನ್ನು ನಾಯಿ ಅಥವಾ ಕಾಗೆಗಳ ಜೊತೆಯಲ್ಲಿ ಬೇರೆಯ ಉತ್ತಮರ ಊಟವಾದ ನಂತರದಲ್ಲಿ ಹಾಕಬಹುದು.

ಮುಂದೆ ಕೌಟಿಲ್ಯನು ಮನುವಿನ ಎಲ್ಲಾ ಶಿಕ್ಷೆಗಳನ್ನು ಅನುಮೋದಿಸಿದನಲ್ಲದೆ ಚಂಡಾಲರಿಗೆ ಊರಿನಿಂದ ಹೊರಗಿನ ವಾಸಸ್ಥಾನವನ್ನು ಖಡ್ಡಾಯ ಮಾಡಿ, ಚಂಡಾಲರು ಪ್ರತ್ಯೇಕ ಬಾವಿ ಮತ್ತು ಕೊಳಗಳಲ್ಲಿ ನೀರನ್ನು ತೆಗೆದು ಉಪಯೋಗಿಸಬೇಕೆಂಬುದನ್ನು ತನ್ನ ಅರ್ಥಶಾಸ್ತ್ರದಲ್ಲಿ ನಿಬಂಧಿಸಿದ್ದಾನೆ. ಈ ಸಿದ್ಧಾಂತವನ್ನು ಅತ್ರಿ, ಯಾಜ್ಞವಲ್ಕ್ಯ, ಗೌತಮ ಮುಂತಾದವರು ಅನುಮೋದಿಸಿದರಲ್ಲದೆ ಚಾಂಡಾಲರು ಅಸ್ಪೃಶ್ಯರಾಗಲು ತಮ್ಮ ಸ್ಮೃತಿಗಳಲ್ಲಿ ಎಲ್ಲಾ ಕಟ್ಟಳೆಗಳನ್ನೂ ನಿರೂಪಿಸಿದ್ದಾರೆ.

"ಮಲಬಾರ್ ರಾಜ್ಯಗಳಲ್ಲಿ ವಾಸವಾಗಿರುವ ಸೆಟ್ಟೈಲರ್ (ಹಿಂದೂ)ಗಳಲ್ಲಿ ಹದಿನೆಂಟು ಜಾತಿಗಳಿವೆ. ಒಂದೊಂದು ಜಾತಿಯೂ ಬೇರೆ ಬೇರೆ. ಒಂದು ಜಾತಿಯವರು ಇನ್ನೊಂದು ಜಾತಿಯವರೊಡನೆ ಯಾವ ವೈವಾಹಿಕ ಸಂಬಂಧಗಳನ್ನಿಟ್ಟುಕೊಂಡಿಲ್ಲ. ಈ ಜಾತಿಗಳಲ್ಲಿ ಎಲ್ಲರಿಗಿಂತಲೂ ನೀಚರೆಂದು ಭಾವಿಸಿರುವ ಪೊಲೆಯ (ಅಸ್ಪೃಶ್ಯ)ರೆಂಬ ಒಂದು ಜಾತಿ ಇದೆ. ಊರ ಹೊರಗಿನ ಹುಲ್ಲುಕೊಳ್ಳೆಗಳಲ್ಲಿ ಯಾರೂ ನೋಡದ ಕಡೆ ಬಹಳ ಕೊಳ್ಳದಾದ ಹಾಗೂ ಹೊಲಸು ಗುಡಿಸಲುಗಳಲ್ಲಿ ಇವರು ವಾಸವಾಗಿದ್ದಾರೆ. ಇವರು ಎತ್ತು ಕೋಣಗಳನ್ನಿಟ್ಟುಕೊಂಡು ಗದ್ದೆಯನ್ನು ಉತ್ತು, ಬಿತ್ತಿ ಬೆಳೆದು ಜಮೀನುದಾರನಿಗೆ ಕೊಡಬೇಕು. ಒಡೆಯರುಗಳೊಡನೆ ಮಾತಾನಾಡಬೇಕಾದರೆ ದೂರದಲ್ಲಿಯೇ ನಿಂತು ಗಟ್ಟಿಯಾಗಿ ಮಾತನಾಡಬೇಕು. ದಾರಿಯಲ್ಲಿ ಹೋಗುವಾಗ ತಾವು ಬರುತ್ತಿರುವುದು ಬೇರೆಯವರಿಗೆ ಗೊತ್ತಾಗಿ ಅವರು ದೊಗ್ಗುಲಾಗಲೆಂದು ಗಟ್ಟಿಯಾಗಿ ಕೂಗುತ್ತಾ ಹೋಗಬೇಕು. ಇವರ ಹೆಂಗಸರು ಅಥವಾ ಗಂಡಸರುಯಾರನ್ನೂ ಮುಟ್ಟಕೂಡದು. ಹಾಗೆ ಮುಟ್ಟಿಸಿಕೊಂಡ ಹೊಲೆಯರನ್ನು ಆಗಲೇ ಕೊಂದುಹಾಕುತ್ತಾರೆ. ಈ ಕಾರಣಕ್ಕಾಗಿ ಅನೇಕ ಹೊಲೆಯರ ಕೊಲೆಯಾಗಿದೆ. ಇವರು ಒಂದು ಕಲ್ಲನ್ನೊ ಅಥವಾ ಕೋಲನ್ನೊ ಸವರ್ಣೀಯರ ಕಡೆಗೆ ಎಸೆದರೆ ಮೈಲಿಗೆಯಾದಂತೆ (ಅದಕ್ಕೂ ಕ್ರೂರ ಶಿಕ್ಷೆ ತಪ್ಪಿದ್ದಲ್ಲ) ಈ ಪೊಲೆಯರಷ್ಟೇ ಕೀಳಾದ ಬೇರೊಂದು ಜಾತಿಯವರಿದ್ದಾರೆ. ಅವರಿಗೆ ಪರೀನ್ (ಪರಿಯ) ಎಂದು ಕರೆಯುತ್ತಾರೆ. ಇವರು ಎಲ್ಲಾ ಜಾತಿಗಳಿಂದ ಬಹಿಷ್ಕೃತರು. ನಿರ್ಜನ ಪ್ರದೇಶದಲ್ಲಿ ಇವರ ವಾಸ. ಯಾರೊಡನೂ ಸಂಪರ್ಕ ಬೆಳೆಸುವಂತಿಲ್ಲ.

ಟಿ.ವೈ. ಭೂತಯ್ಯ

ಅವರನ್ನು ದೆವ್ವಗಳೆಂದು ಇಲ್ಲಿಯ ಜನ ಭಾವಿಸುತ್ತಾರೆ. ಇವರ ದರ್ಶನವಾದರೂ ಮೈಲಿಗೆಯಾಗುತ್ತೆ; ಅಷ್ಟೇ ಅಲ್ಲ ಜಾತಿ ಕೆಡುತ್ತದೆಂದು ಇತರರು ಭಾವಿಸುತ್ತಾರೆ. (ಪ್ರವಾಸಿ ಕಂಡ ಇಂಡಿಯಾ-ಎಚ್.ಎಲ್. ನಾಗೇಗೌಡ)

೧) ಆದಿ ದ್ರಾವಿಡ ಚಿನ್ನ ಅಥವಾ ಬೆಳ್ಳಿಯನ್ನು ಧರಿಸಬಾರದು.

೨) ಆದಿ ದ್ರಾವಿಡರ ಗಂಡಸರು ಮೊಣಕಾಲಿನಿಂದ ಕೆಳಗೆ ಮತ್ತು ಸೊಂಟದಿಂದ ಮೇಲೆ ಬಟ್ಟೆಯನ್ನು ಉಡಬಾರದು.

೩) ಗಂಡಸರು ತಲೆ ಕೂದಲನ್ನು ನೀಟಾಗಿ ಬಾಚುವುದು ಅಥವಾ ಕ್ರಾಪು ಬಿಡುವುದು ತಪ್ಪು.

೪) ಇವರ ಮನೆಗಳಲ್ಲಿ ಮಣ್ಣಿನ ಪಾತ್ರೆಗಳನ್ನು ಬಿಟ್ಟು ಬೇರೆ ಯಾವುದೇ ರೀತಿಯ ಲೋಹದ ಪಾತ್ರೆಗಳನ್ನು ಉಪಯೋಗಿಸಬಾರದು.

೫) ಆದಿ ದ್ರಾವಿಡರ ಹೆಂಗಸರು ಹೂವು ಮುಡಿಯುವುದಾಗಲಿ ಅಥವಾ ಕುಂಕುಮ ಧರಿಸುವುದಾಗಲಿ ನಿಷಿದ್ಧ.

೬) ಗಂಡಸರು ಉರಿಬಿಸಿಲು ಅಥವಾ ಜಡಿ ಮಳೆಯೇ ಆದರೂ ಕೊಡೆ ಹಿಡಿಯಬಾರದು ಮತ್ತು ಚಪ್ಪಲಿ ಹಾಕಿಕೊಂಡು ನಡೆಯಬಾರದು.

೭) ಅವರ ಮಕ್ಕಳು ಓದುವುದು ಬರೆಯುವುದು ಮುಂತಾದ ವಿದ್ಯೆಗಳನ್ನು ಕಲಿಯುವುದು ಅಪರಾಧ.

ಗತ ಕಾಲದಿಂದ

೮) ಆ ಮಕ್ಕಳು ಬೇರೆಯವರ ಮನೆಯ ದನಕರುಗಳನ್ನು ಕಾಯಬೇಕು.

೯) ಗಂಡಸಾಗಲಿ ಅಥವಾ ಹೆಂಗಸಾಗಲಿ ಸದಾ ಉತ್ತಮ ವರ್ಗದವರ ಹತ್ತಿರ ಕೂಲಿ ಕೆಲಸ ಮಾಡಬೇಕಾಗಿದ್ದು, ಬೆಳಿಗ್ಗೆ ೭ ಗಂಟೆಯಿಂದಸಂಜೆ ೬ರ ತನಕ ದುಡಿಯಬೇಕು. ಪ್ರತಿಫಲವಾಗಿ ಸಾಹುಕಾರರು ಕೊಡುವ ಎರಡು ಆಣೆ (೧೨ ಪೈಸೆ)ಕೂಲಿಯನ್ನು ತೆಗೆದುಕೊಳ್ಳಬೇಕು.

೧೦) ಈ ಜನರು ಸ್ವಂತವಾಗಿ ಜಮೀನುಗಳನ್ನು ಹೊಂದಿರಬಾರದು. ಹಾಗೇನಾದರೂ ಇದ್ದರೆ ಸುಲಭ ದರದಲ್ಲಿ ಉತ್ತಮ ವರ್ಣೀಯರಿಗೆ ಮಾರಿಬಿಡಬೇಕು.

೧೧) ಅವರು ಸ್ವಂತ ಜಮೀನನ್ನು ಉಳುಮೆ ಮಾಡಬಾರದು. ಒಂದು ವೇಳೆ ಉಳುಮೆ ಮಾಡಿದರೆ ಅವರ ಜಮೀನುಗಳಿಗೆ ಕೆರೆಯಿಂದ ನೀರು ಹಾಯಿಸಕೂಡದು. ಮಳೆಯ ಆಶ್ರಯದಲ್ಲಿಯೇ ಜಮೀನಲ್ಲಿ ಬೆಳೆ ಬಂದರೂ ಕೊಯ್ಲು ಕಾಲದಲ್ಲಿ ಯಾರೂ ಬೇಕಾದರೂ ಈತನ ಹೊಲದ ಫಸಲನ್ನು ಲೂಟಿ ಮಾಡಬಹುದು.

೧೨) ಈ ಜನರು ಲಗ್ನ ಕಾಲದಲ್ಲಿಯೇ ಆಗಲಿ ಇತರ ಹಬ್ಬ ಹುಣ್ಣಿಮೆಯ ಕಾಲದಲ್ಲಿಯೇ ಆಗಲಿ ತಾಳ ಮೇಳಗಳು ಅಥವಾ ಇತರ ಮಂಗಳ ವಾದ್ಯಗಳನ್ನು ಉಪಯೋಗಿಸಕೂಡದು. ಅವರು ಕುದುರೆಯ ಮೇಲಾಗಲೀ ಅಥವಾ ಇತರ ವಾಹನಗಳ ಮೇಲಾಗಲೀ ಹತ್ತಿಕೊಂಡು ಮೆರವಣಿಗೆ ಹೋಗಕೂಡದು.

ಈ ಕಟ್ಟುಪಾಡುಗಳನ್ನು ಅನುಸರಿಸಲಾಗದ ಆದಿದ್ರಾವಿಡರಿಗೆ ಉಗ್ರ ಶಿಕ್ಷೆಯನ್ನು ಕೊಡಲಾಗುತ್ತದೆ. ಮತ್ತು ಮನೆಗಳನ್ನು ಲೂಟಿ ಮಾಡಲಾಗುತ್ತದೆ. ಹೀಗೆಯೇ ಆ ಕಾಲದ ಹಿಂದೂ ಪತ್ರಿಕೆಯನ್ನು ತೆಗೆದು ನೋಡಿದರೆ ಒಂದಲ್ಲಾ ಒಂದು ರೀತಿಯ ಕಟ್ಟುಪಾಡಿಗೆ ದಲಿತರನ್ನು ಒಳಗು ಮಾಡಿದ ವಿಚಾರವನ್ನು ಗಮನಿಸಬಹುದು. ಉದಾಹರಣೆಗಾಗಿ ದಿನಾಂಕ ೨೪ರ ಹಿಂದೂ ಪತ್ರಿಕೆಯು ದ್ರಾವಿಡ ಜನಾಂಗದವರು ಇತರರ ಕಣ್ಣಿಗೆ ಕಾಣದಂತೆ ರಾತ್ರಿ ವೇಳೆಯಲ್ಲಿಯೇ ಕಸಗುಡಿಸುವ, ಗಲೀಜು ಶುದ್ಧಿ ಮಾಡುವುದೇ ಮುಂತಾದ ಕೆಲಸಗಳನ್ನು ಮಾಡಬೇಕು ಎಂದು ತಿಳಿಸಿರುವುದು.

'ಸಾರಿ, ಮೊದಲೆ ಹೇಳಬಾರದೆ ?'

ಒಂದು ದಿನ ಕಾಲೇಜು ಮುಗಿದ ನಂತರ ಮನೆಗೆ ಹೋಗಲು ನಾನು, ನನ್ನಗೆಳತಿ, ಕಾಲೇಜಿನ ಹತ್ತಿರವಿರುವ ಬಸ್ ಸ್ಟಾಪಿನ ಬಳಿ ಬಂದೆವು. ಬಸ್ಸು ಬರುವುದಕ್ಕೆ ಇನ್ನೂ ಸಮಯವಿದ್ದುದರಿಂದ ನಾವಿಬ್ಬರು ಒಂದು ಕಡೆ ಮಾತಾಡುತ್ತಾ ಕುಳಿತೆವು. ಅಷ್ಟರಲ್ಲಿ ಸುಮಾರು ನಮ್ಮ ವಯಸ್ಸಿನವಳೇ ಆದ ಒಬ್ಬಾಕೆ ನಮ್ಮ ಹತ್ತಿರ ಬಂದಳು. ಅವಳು ನನಗೆ ಸ್ವಲ್ಪ ಪರಿಚಯವಿತ್ತು. ಆದರೂ ಅವಳು ಯಾರು? ಎಂಬದು ನನ್ನ ಜ್ಞಾಪಕಕ್ಕೆ ಬರಲಿಲ್ಲ. ಅವಳೇ ನನ್ನನ್ನು ನೋಡಿ "ನೀವು ಉಮಾ ಅಲ್ವಾ ನಾನು ಗೊತ್ತಾಗಲಿಲ್ವಾ ನಿಮಗೆ" ಎಂದಳು. ಆದರೂ ಜ್ಞಾಪಕಕ್ಕೆ ಬರದೆ "ಸಾರಿ ನನಗೆ ಮರೆತು ಹೋಗಿದೆ ನೀವು ಯಾರು" ಎಂದು ಪ್ರಶ್ನಿಸಿದೆ. ಎಲ್ಲೋ ಒಂದು ಸಾರಿ ನಮಗೆ ಪರಿಚಯವಾಗಿದ್ದುದನ್ನು ತಿಳಿಸಿದಳು. ಆಗ ನನ್ನ ಸ್ಮೃತಿ ಶಕ್ತಿ ಕೆಲಸ ಮಾಡಿ ಅವಳು ಯಾರೆಂಬುದನ್ನು ತಿಳಿಸಿತು. ಅವಳೂ ನನ್ನಂತೆಯೇ ಒಬ್ಬ ವಿದಾರ್ಥಿನಿಯಾಗಿದ್ದಳು. ಮೂವರೂ ಮಾತನಾಡುತ್ತಾ ಕುಳಿತು ಕೊಂಡಾಗ ಸ್ವಲ್ಪ ದೂರದಲ್ಲಿ ಒಂದು ಹುಡುಗಿ ಬರುತ್ತಿರುವುದು ಕಾಣಿಸಿತು. ಅವಳು ದೂರದಲ್ಲಿ ಬರುತ್ತಿರುವ ಹುಡುಗಿಯನ್ನು ತೋರಿಸಿ "ಉಮಾ ಅಲ್ಲಿ ಬರ್ತಾ ಇದ್ದಾಳಲ್ಲ ಹಳದಿ ಸೀರೆ, ಅವಳು ಯಾರು ಗೊತ್ತ, ಅವಳು ಎಸ್.ಸಿ. ಕಣೆ, ನನ್ನ ಕ್ಲಾಸ್ ಮೇಟ್. ಅವಳನ್ನು ನೋಡಿದರೆ ಒಂದು ಸ್ವಲ್ಪವೂ ಎಸ್.ಸಿ. ಅನ್ನೋದು ಗೊತ್ತಾಗೊಲ್ಲ ಅಲ್ವಾ? ಈಗಂತೂ ಅವರೂ ನಮಗಿಂತ ಹೆಚ್ಚಾಗಿ ಇರುತ್ತಾರೆ. ಹಾಳಾದವರು ನಮ್ಮನ್ನು ಮುಟ್ಟಸಿ ಕೊಂಡರೂ ಗೊತ್ತೇ ಆಗೋಲ್ಲ" ಎಂದಳು, ಪುನಃ ಅವಳು ಮಾತನ್ನು ಮುಂದುವರಿಸಿ ಆ ಹುಡುಗಿಯನ್ನು ನೋಡುತ್ತಾ "ಇವಳು ಬೆಳಿಗ್ಗೆ ಬಸ್ಸಿನಲ್ಲಿ ನನ್ನ ಪಕ್ಕದಲ್ಲೇ ಕುಳಿತಿದ್ದಳು. ಇದು ನನ್ನ ಅಮ್ಮನ ಸೀರೆ ಕಣೆ (ರೇಷ್ಮೆ ಸೀರೆ ಉಟ್ಟಿದ್ದಳು) ಮೈಲಿಗೆಯಾಗೋಯ್ತು. ನಮ್ಮಮ್ಮ ಇವತ್ತು ಮಂಗಳಗೌರಿ ವ್ರತ ಎಂದು ಉಟ್ಕೊಂಡು ಹೋಗು ಅಂತ ಹೇಳಿದ್ರು. ನಾನು ಯಾಕಾದ್ರೂ ಉಟ್ಕೊಂಡು ಬಂದೆನೋ ಉಮ. ಈಗ ಇಂಥಾ ಒಳ್ಳೆಯ ಸೀರೆಯನ್ನು ಒಗೆಯಲು ಹಾಕಬೇಕೆಂದರೆ ಎಷ್ಟು ಹೊಟ್ಟೆ ಉರಿದು ಹೋಗುತ್ತದೆ." ಎಂದು ಇನ್ನೂ ಏನೇನೋ ಹೇಳುವುದರಲ್ಲಿದ್ದಳು. ಅಷ್ಟರಲ್ಲೇ ನಾನು "ಏನೇ ನೀನು ಇಷ್ಟು ಓದಿ ಏನು ಪ್ರಯೋಜನ ಸಿಟಿಯಲ್ಲಿದ್ದುಕೊಂಡು, ವಿದ್ಯಾವಂತೆಯಾಗಿದ್ದು ಜಾತಿ ಬಗ್ಗೆ ಮಾತಾನಾಡುತ್ತೀಯಲ್ಲ. ಅಕಸ್ಮಾತು ಅವಳು ಯಾರು ಎಂಬುದು ಗೊತ್ತಿಲ್ದೆ ಇದ್ರೆ ಏನು ಮಾಡ್ತಾ ಇದ್ದೆ. ಪ್ರತಿ ದಿನವೂ ಓಡಾಡುವಾಗ ಪಕ್ಕದಲ್ಲಿ ಕುಳಿತಿರುವವರನ್ನು, ನಿಂತಿರುವವರನ್ನು ನಿಮ್ಮ ಜಾತಿ ಯಾವುದು ಎಂದು ಕೇಳ್ತೀಯಾ ? ಯಾರು ಯಾವ ಜಾತಿಯಾದರೇನು? ಕ್ಲೀನಾಗಿದ್ದರೆ ಸರಿ ಎಂದು ಹೇಳಿದಾಗ "ಹಾಗಾದರೆ ಅವರ

ಅನುಭವದ ಗಣಿಯಿಂದ

ಜಾತಿಯವರ ಮನೆಯಲ್ಲಿ ತಿನ್ನ ಬೇಕು, ಕುಡಿಯ
ಬೇಕು, ಅವರ ಮನೆಯಲ್ಲಿ ಓಡಾಡಬೇಕ
ಅಂತಲೆ ನೀನು ಹೇಳುವುದು? ನಿಮ್ಮಂತಹವರ
ಸಪೋರ್ಟ್ ಮಾಡಿರೋದರಿಂನ್ನೇ ಅವರು ಹೆಚ್ಚ
ಕೊಂಡಿರುವುದು". ನಮಗೆ ಆಗ ಒಂದು ಕ್ಷಣ
ನಗು ಬಂದಿತು. "ನಾವು ಯಾವ ಜಾತಿ ಅಂ
ತಿಳಿದು ಕೊಂಡಿದ್ದೀಯಾ? ನಾವೂ ಎಸ್.ಸಿ.ಗಳ
ಕಣೆ ಎಂದಾಗ ಬೆಚ್ಚಿ ಬಿದ್ದಂಥವಳಾಗಿ, ನಮ್ಮಿಂ
ಕೊಂಚ ದೂರ ಸರಿದು "ಹೋಗೆಲೇ ನೀನು ಬರಿ
ಸುಳ್ಳು ಹೇಳ್ತಾ ಇದ್ದೀಯಾ ಖಂಡಿತಾ ನಿಜನೆ
ನೀ ಹೇಳ್ತಾ ಇರೋದು?" ಎಂದು ಪದೇ ಪದ
ಕೇಳತೊಡಗಿದಳು. ಅವಳ ಮುಖದಲ್ಲಾಗು
ಬದಲಾವಣೆಯನ್ನೇ ಗಮನಿಸುತ್ತಾ ಇದ್ದೆವ
"ಸಾರಿ ಉಮಾ ನನಗೆ ನೀವು ಎಸ್.ಸಿ. ಅಂ
ಗೊತ್ತಿರಲಿಲ್ಲ ಏನೇನೊ ಮಾತಾಡಿದೆ, ಮೊದಲ
ಹೇಳಬಾರದಿತ್ತೆ ಛೆ ಸಾರಿ..." ಅಷ್ಟರಲ್ಲಿ ಬಸ
ಬಂದದ್ದರಿಂದ ಬಸ್ಸು ಹತ್ತಾಬೇಕಾಯಿತು ಬಸ
ಚಲಿಸುತ್ತಾ ಇದೆ ಅನ್ನಿಸಲಿಲ್ಲ. ಮನಸ್ಸಿಗೆ ಆ
ಗಾಯದಿಂದಾಗಿ ಅಂದು ರಾತ್ರಿ ನಿದ್ರೆ ದೂ
ವಾಯಿತು.

—ಬಿ. ಉಮಾರಾಣಿ, ಮೈಸೂ

ಕತ್ತಲೆ ಮತ್ತು ಕಲ್ಲು ಬಂಡೆಗಳ ನಡುವೆ

ಒಮ್ಮೆ ನಾನು ನನ್ನ ಸ್ನೇಹಿತನೊಡನೆ ಶಿವನ ಸಮುದ್ರ, ಬ್ಲಫ್ ನೋಡಲು ಹೋಗಿದ್ದೆ. ಹಿಂತಿರುಗಿದಾಗ ರಾತ್ರಿಯಾಗಿತ್ತು. ಮೈಸೂರು ಕಡೆಯ ಬಸ್ಸಿಗಾಗಿ ಕಾಯುತ್ತಿದ್ದೆವು. ಬಸ್ಸುಸಿಕ್ಕಲಿಲ್ಲ, ಕೊನೆಗೆ ಲಾರಿಗಳಾದರೂ ಸಿಕ್ಕಬಹುದೆಂದು ಕಾಯುತ್ತಾ ನಿಂತಿದ್ದೆವು. ಅಪರಿಚಿತನೊಬ್ಬ ಸಿಕ್ಕಿ "ಲಾರಿಗಳು ಬಂದರೂ ಕೂಡ ಕರೆದುಕೊಳ್ಳುವುದಿಲ್ಲ. ಆದರಲ್ಲೂ ಬಂಡೆ ಸಾಗಿಸುವ ಲಾರಿಯವರಂತೂ ಕರೆದುಕೊಳ್ಳುವುದೇ ಇಲ್ಲ" ಎಂದು ಹೇಳಿದ. ಯಾತಕ್ಕಾಗಿ ಎಂದು ಕೇಳಿದುದಕ್ಕೆ : "ತಮ್ಮ ಹೇಸರೇನು?" ಎಂದು ಕೇಳಿದ. ನಮಗೆ ಆಶ್ಚರ್ಯವಾಯ್ತು. ನನ್ನ ಸ್ನೇಹಿತ "ರಾವ್" ಎಂದು ಹೇಳಿದ. ಬಹುಶಃ ಆತನಿಗೆ ಇವರು ಯಾವ ಜಾತಿಯವರೆಂದು ಖಾತ್ರಿಯಾಗಿರಬಹುದು. ಲಾರಿಯವರು ಕರೆದೊಯ್ಯದಿರುವುದರಕಾರಣ ತಿಳಿಸಿದ:

ಕಳೆದ ಎರಡು ತಿಂಗಳ ಹಿಂದೆ ಹರಿಜನನೊಬ್ಬನು ಬಂಡೆಸಾಗಿಸುವ ಲಾರಿಯಲ್ಲಿ ಮೈಸೂರಿಗೆ ತರಕಾರಿ ಸಾಗಿಸುತ್ತಿದ್ದನು. ಆ ವ್ಯಕ್ತಿ ತರಕಾರಿ ಬುಟ್ಟಿ ಇಟ್ಟುಕೊಂಡು ಹೊರಗಡೆ ಕುಳಿತಿದ್ದನಂತೆ. ರಾತ್ರಿ ಲಾರಿ ವೇಗವಾಗಿ ಚಲಿಸುತಿತ್ತು. ಮೈಸೂರು ತಲುಪಿದಾಗ ಹಿಂದುಗಡೆ ಕುಳಿತವನನ್ನು ಇಳಿಯಲು ಡ್ರೈವರ್ ಹೇಳಿದನಂತೆ. ಆದರೆ ಆತ ಇಳಿಯದಿದ್ದುದನ್ನು ಕಂಡು ಆಶ್ಚರ್ಯ ವಾಯ್ತು ಲಾರಿಯಿಂದ ಇಳಿದ ಡ್ರೈವರ್ ಗದರಿಸಿ ಆತನನ್ನು ಇಳಿಯಲು ಹೇಳಿದನಂತೆ. ಲಾರಿಯಲ್ಲಿದ್ದ ಬಂಡೆಗಳೆರಡು ಕಟ್ಟಿದ್ದ ಹಗ್ಗ ಸಡಿಲವಾಗಿ ಬಂಡೆಗಳೆರಡು ಅಂಟಿಕೊಂಡಿದ್ದವಂತೆ, ಬಂಡೆಗಳ ಮಧ್ಯೆ ಆ ವ್ಯಕ್ತಿ ಅಪ್ಪಚ್ಚಿಯಾಗಿದ್ದನಂತೆ. ತರಕಾರಿಯ ಬುಟ್ಟಿಯಂತೂ ಎಲ್ಲೋ ಬಿದ್ದು ಹೋಗಿತ್ತು. ಈವೊಂದು ಸಾವಿನ ಕಾರಣಕ್ಕಾಗಿ ಲಾರಿಯವರು ಯಾರನ್ನೂ ಕರೆದುಕೊಳ್ಳುವುದಿಲ್ಲವೆಂದು ವಿವರಿಸಿದ, ಇದನ್ನು ಹೇಳಲೂ ಆ ವ್ಯಕ್ತಿ ಜಾತಿಯನ್ನು ಯಾಕೆ ಕೇಳಿದ ತಿಳಿಯದಾಯ್ತು. ಚಿಂತಿಸುತ್ತಾ ಹೋದಂತೆ ಚಿಂತೆಯಷ್ಟೇ ಉಳಿಯಿತು.

—ಬಿ.ಆರ್. ಜೋಯಪ್ಪ, ಮೈಸೂರು–9

ನಾವು ದೇವರಿಗೂ ಬೇಡವೆ ? ನಾವು ಮನುಷ್ಯರಲ್ಲವೆ ?

ನಾನು ಆಗ ತಾನೆ ಶ್ರೀ ಶಬರಿಮಲೈ ಅಯ
ಪ್ಪ ಸ್ವಾಮಿ ದರ್ಶನ ಮಾಡಿ ಮಕರ ಜ್ಯೋತಿಂ
ನ್ನು ವೀಕ್ಷಿಸಿ ಊರಿಗೆ ಹೋಗಿದ್ದೆ. ಅಲ್ಲಿ ಒಂ
ದೇವರ ಉತ್ಸವ ನಡೆಯುತ್ತಿದ್ದು, ಪಲ್ಲಕ್ಕಿಯ
ದೇವರನ್ನು ಹೊತ್ತು(ಅಡ್ಡೆ-ಗ್ರಾಮ್ಯ ಭಾಷೆಯ
ಕುಣಿಯುತ್ತಾ ವಾದ್ಯಗೋಷ್ಠಿಯೊಂದಿಗೆ ಬ
ತ್ತಿದ್ದರು. ನಾನು ದೇವರಿಗೆ ತೆಂಗಿನ ಕಾ
ಒಡೆಮ, ಕರ್ಪೂರ ಹಚ್ಚುವ ಉದ್ದೇಶ. ನಾ
ಸ್ವತಃ ಅಡ್ಡೆಯನ್ನು ಮುಟ್ಟಿ ಕರ್ಪೂರ ಹಚ್ಚಿ
ಅಲ್ಲಿಯ (ಲಿಂಗಾಯಿತರು) ಯುವಕರು ಅವ
ಅಡ್ಡೆ ಮುಟ್ಟಿದನಲ್ಲಾ ಎಂದು ನನ್ನನ್ನು ಹೊ
ಯುವ(ನಾನು ಹರಿಜನದವನಾದ್ದರಿಂದ)ಹವಣ
ಯಲ್ಲಿದ್ದರು. ಅಷ್ಟರಲ್ಲಿ ಯಾರೋ ಒಬ್ಬ ಗ
ರು ಅವನು ಶಬರಿಮಲೈಯಿಂದ ಬಂದಿದ್ದಾನೆಅ
ಭಕ್ತಿ ಅವನಿಗೆ ಸುಮ್ಮನಿರಿ ಎಂದು ಸಮಾಧಾ
ಮಾಡಿದರು. ನನಗೆ ಅನ್ನಿಸುತ್ತೆ ದೇವರಿ
ನಾವೂ ಬೇಡವಾದವರೇ? ಎಂದು.

—ಟಿ. ಕೆ. ಪುಟ್ಟಯ್ಯ, ಸೋಮವಾರಪ

...ಂದೂ ರಕ್ತದ ಕಣ ಕಣದಲ್ಲಿ.............

...ಂದೂ ರಕ್ತದ ಕಣಕಣಗಳಲ್ಲೆಲ್ಲ ಜಾತೀಯ ...ರ ಮೊಟ್ಟೆಗಳು ಮರಿ ಮಾಡುತ್ತಿರುವುದು ...ಗಾದ ಅವಮಾನದಿಂದ ಗೊತ್ತಾಯಿತು. ...ಸೈಸೂರಿನಲ್ಲಿ ನಾವಿರುವ ರೂಮಿನ ಪಕ್ಕದಲ್ಲಿ ...ಭ್ಯಾಸಕ್ಕೆ ಬಂದಿರುವ ಕೆಲವು ಸವರ್ಣೀಯ ...ರ್ಥಿಗಳು ವಾಸವಾಗಿರುವರು. ಸಿದ್ದೇಗೌಡ ... ಟಿ.ಸಿ.ಎಚ್. ವಿದ್ಯಾರ್ಥಿ ನಮ್ಮನ್ನು ...ು ಪ್ರೀತಿಯಿಂದ ಕಾಣುತ್ತಾ, ಆಗಾಗ್ಗೆ ... ರೂಮಿಗೆ ಬರುತ್ತಿದ್ದ. ಒಂದೊಂದು ... ನಮ್ಮ ರೂಮಿಗೆ ಹೆಚ್ಚು ಜನರು ಬಂದಾಗ ...ತ ಮಾಡಲು ತಟ್ಟೆಗಳು ಸಾಲದ ಸಂದರ್ಭ ... ಆತ ಭಿನ್ನ ಭೇದ ಮಾಡದೆ ತನ್ನ ತಟ್ಟೆ ...ನ್ನು ಊಟಕ್ಕೆ ಕೊಟ್ಟು ಸಹಕರಿಸುತ್ತಿದ್ದ.

ಆರ್. ಎಸ್. ದೊಡ್ಡಣ್ಣ

...ಲ್ಲಾ ಅವನಲ್ಲಿದ್ದ ಒಳ್ಳೆಯ ಗುಣಗಳನ್ನು ...ು ನಾವೂ ಕೂಡ ಮೆಚ್ಚಿಕೊಂಡಿದ್ದೆವು. ...ಯಶಹಃ ಆತ ನಮ್ಮನ್ನು ಆಗ ಒಕ್ಕಲಿಗ ... ತಿಳಿದುಕೊಂಡಿರಬೇಕು. ನಾವು ಎಂದೂ ... ಕೂಡ ನಮ್ಮ ಜಾತಿಯನ್ನು ಮುಚ್ಚಿಟ್ಟ ...ು. ಅಲ್ಲದೆ ನಮ್ಮ ಮುಖಗಳಿಂದ ಆತ ನಮ್ಮ ...ತಿಯನ್ನು ಅರಿತುಕೊಂಡಿದ್ದ. ...ೇಗಿರುವಾಗ ಒಂದು ದಿನ ನಮ್ಮ ಪಕ್ಕದಲ್ಲಿ ...ವಾಗಿದ್ದ ಶಂಕರೇಗೌಡ ಮತ್ತು ಸಿದ್ದೇಗೌಡ ...ರೂ ಭೇಟಿಯಾಗಿ ತಮ್ಮ ತಮ್ಮ ಕ್ಷೇಮ ...ಚಾರ ಮಾತನಾಡುವ ಮಧ್ಯೆ ನಮ್ಮ ... ಬಂದು ನಮ್ಮ ಜಾತಿ ಇತ್ಯಾದಿ ಎಲ್ಲವೂ ...ಗೌಡನಿಗೆ ಗೊತ್ತಾದ ಮೇಲೆ ಆತ ನಮ್ಮ ...ಗೆ ಬರುವುದನ್ನು ನಿಲ್ಲಿಸಿದ. ಆದರೆ ಈ ... ನಾವು ಊಟ ಮಾಡಿದ ಎಂಜಲು ತಟ್ಟೆ, ... ಆತ ಊಟ ಮಾಡಿದ್ದನ್ನು ಮರೆಯಲಾರದೆ ...ದಿನಾ ನೆನಸಿ ನೆನಸಿಕೊಂಡು ಮಾನಸಿಕ ...ಗೆ ಒಳಗಾಗಿ ಚಳಿ ಜ್ವರ ಬಂದು ಉಷಾರ್ ...ಟ್ಟ. ಇದರ ಪರಿಹಾರಕ್ಕಾಗಿ ಆತ ಸ್ನಾನ ... ದೇವರಿಗೆ ಹರಕೆ ಕಟ್ಟಿಕೊಂಡಿದ್ದು ನಮಗೆ ...ರಲಿಲ್ಲ.

ದಿನಾಂಕ 21-9-81ರಂದು ಸ್ನೇಹಿತ ಸತ್ಯ ನಾರಾಯಣ ಶೆಟ್ಟರು(ಅಪರೂಪವಾಗಿದ್ದ) ಸಿದ್ದೇ ಗೌಡರನ್ನು ನೋಡಲು ಆತನಿದ್ದ ರೂಮಿಗೆ ಹೋದರು. ರೂಮಿನಲ್ಲೇ ಕರಳಿತಿದ್ದ ಸಿದ್ದೇಗೌಡ ರಲ್ಲಿ ಮೊದಲಿದ್ದ ಸೌಜನ್ಯಗಳು ಕಾಣಲಿಲ್ಲವಂತೆ ಆತ ಕುಳಿತಲ್ಲೇ ಸತ್ಯನಾರಾಯಣರನ್ನು ನೋಡು ತ್ತಾ,ರ್ರೀ ಸ್ವಾಮಿ ನೀವು ಹಿಂಗಾ ಮಾಡೋದು? ಹಃ ಎಂದನಂತೆ

ಸ್ನೇಹಿತ : ಎನ್ರಿ ... ?

ನನಗೆ ಆಗಲೇ ಒಂದು ವಾರದಿಂದ ಒಂದು ತರಾರೀ ......

ಸ್ನೇಹಿತ : ಯಾಕರ್ರೀ ?

ನಮ್ಮ ದೇವರಿಗೆ ಅದು ಆಗೋಲ್ಲಾರೀ ... ಒಂದೊಂದು ದೇವರಿಗೆ ಒಂದೊಂದು ತರಾ ..... ನಮ್ಮದು ಪಿರಿಯಾಪಟ್ಟಣದಮ್ಮ. ಬೈರಪ್ಪ ಅವು ತುಂಬ ಸ್ಟ್ರಿಕ್ಟ್ ರ್ರೀ ಎಂದಾಗ ಸತ್ಯನಿಗೆ ಒಂದೂ ಗೊತ್ತಾಗದೆ ಸುಮ್ಮನೆ ನಿಂತಾಗ ಆತ ಮುಂದುವರಿಸುತ್ತಾ, ಸುಳ್ಳಲ್ಲಾರೀ ನಮ್ಮ ದನೀನ ಹಾಲು ಕೊಟ್ರೆ ರಕ್ತಕರಿತವೇರ್ರೀ....ನೀವು ನಮ್ಮೋರಲ್ಲವಂತೆ? ಈಗ ನಮ್ಮ ರೂಂಮೇಟ್ ಹೇಳಿದರು. ನಿಮ್ಮ ರೂಮಲ್ಲಿ ಮೊದಲು ಇದ್ದ ವರು ಲೋಕೇಶ ಅಲ್ಲವಂತೆ ಅವರು ಕಾಳಯ್ಯ ನಂತೆ? ಇತ್ತೀಚೆಗೆ ಅವರು ಲೋಕೇಶ ಅಂತ ಹೆಸರು ಬದಲಾಯಿಸಿಕೊಂಡರಂತೆ, ನೀವೂ ಅವರ ಕಡೆಯವರಂತೆ? ಎಂದಾಗ ಸತ್ಯ ಉತ್ತರಿಸಲಾಗದೆ ಮಾತು ಬದಲಾಯಿಸಿ ಈಗ ಉಷಾರಾಗಿದ್ದೀರಾ? ಎನ್ನಲು ಪಿರಿಯಾಪಟ್ಟಣದಮ್ಮನಿಗೆ ಹರಕೆ ಕಟ್ಟಿ ಕೊಂಡ ಮೇಲೆ ಸ್ವಲ್ಪ ಪರವಾಗಿಲ್ಲ ಎಂದು ಹೇಳಿ ದ್ದನ್ನು ಕೇಳಿ ಪುತಿ ಮಾತಾಡದೆ ತಲೆಕೆಟ್ಟವರಂತೆ ಬಂದರು.

ಸ್ನೇಹಿತನಿಗಾದ ಅನುಭವವನ್ನು ಕೇಳಿ, ಸಿದ್ದೇ ಗೌಡನ ಮನಸ್ಸಿನಲ್ಲಿದ್ದ ಜಾತೀಯತೆಯ ಬೇರನ್ನು ಕೀಳಲು ಪ್ರಯತ್ನಿಸಿದಾಗ ಹೇಳಿದ್ದು ಹೀಗೆ,

ಕಲಗಚ್ಚನ್ನು (ಎಂಜಲು ನೀರನ್ನು) ಕೆಲವು ದನಗಳು ಕುಡಿಯೋದಿಲ್ಲ ಅಂಗೇ ನನಗೆ ನಿಮ್ಮ ಜಾತಿ ಒಗ್ಗೋದಿಲ್ಲವೆಂದ

ತಾಜಮಹಲು

ಪ್ರಿಯೇ,
ತಾಜ್—ನಿನಗೊಂದು ಪ್ರೇಮ ದ್ಯೋತಕವೇ ಸರಿ
ಈ ರಮ್ಯ ಸ್ಥಳ ನಿನಗೆ ಪವಿತ್ರವೇ ಸರಿ
ಬೇಡ, ಇಲ್ಲಿ ಬೇಡ ಪ್ರಿಯೆ
ಬೇರೆಲ್ಲಿಯಾದರೂ ಭೇಟಿಯಾಗು
ಬಾದುಶಾಹರ ದರ್ಬಾರಿನಲ್ಲಿ
ಬಡವರ ಬಾಳುವೆಗೆ ಅರ್ಥವೇನು ?
ಯಾವ ದಾರಿಯಲಿ ರಾಜ ವೈಭವದ
ಸಂಕೇತ ಹರಡಿರುವುದೋ
ಆ ಎಡೆಯಲ್ಲಿ ಪ್ರೇಮಿಗಳ
ಪ್ರಯಾಣದ ಅರ್ಥವೇನು ?
ಪ್ರಿಯೆ—
ಪ್ರೇಮ-ನಿಷ್ಠೆ ಪರದೆಯ ಮುಖವಾಡದ ಹಿಂದೆ
ನೀನು ವೈಭವದ ಅಂಕಿತ ನೋಡಿದ್ದಾದರೆ
ಸತ್ತ ರಾಜರ ಸಮಾಧಿಯಿಂದ ಸಮಾಧಾನ
ಗೊಳ್ಳುವ ನೀನು ಒಮ್ಮೆ
ನೀನ್ನಿ ಕತ್ತಲೆ ಮನೆನೋಡಿದ್ದಾದಳೆ
ಕೇಳು ಪ್ರಿಯೆ—
ಈ ಜಗತ್ತಿನಲ್ಲಿ ಅಸಂಖ್ಯ ಜನ
ಪ್ರೀತಿ ಮಾಡಿದ್ದಾರೆ
ಅವರ ಪ್ರೀತಿ ನಿಜವಲ್ಲವೆಂದು ಯಾರು
ಹೇಳುವರು ?
ಆದರೆ ಅದನ್ನು ಸೂಚಿಸುವ ಯಾವ
ಕುರುಹು ಯಿಲ್ಲ ಚಿನ್ಹೆಯಿಲ್ಲ, ಯಾಕೆಂದರೆ
ಅವರು ಸಹ ನಮ್ಮಂತೆ ಬಡಪಾಯಿಗಳು
ಈ ಗೋರಿ ಕಟ್ಟಡ, ಸುತ್ತುವರೆದ ಕೋಟೆ
ಸುಲ್ತಾನರ ಸ್ವೇಚ್ಛಾಚಾರ ಸೂಚಿಸುವ
ಮಹಾನ್ ಸ್ತಂಭ
ಅವರ ಸಂಸಾರ ಸೆರಗಿನ ಮೇಲೆ ಬಿಡಿಸಿದಾ
ಬಣ್ಣ ಬಣ್ಣದ ಕಸೂತಿಗೆ ನನ್ನ ನಿನ್ನ ಪೂರ್ವಜರ
ರಕ್ತ-ಬೆಲುವು ತುಂಬಿದೆ
ಪ್ರಿಯೇ,
ಅವರಿಗೂ ಸಹ ಪ್ರೀತಿ ಇದೆ
ಯಾರ ಕರ ಕುಶಲತೆ ನೀಡಿರುವುದೋ
ಈ ಕಟ್ಟಡಕ್ಕೆ ಸುಂದರ ರೂಪ
ಅವರ ಪ್ರೇಯಸಿಯರ ಸಮಾಧಿಗಳು
ಮಣ್ಣುಗೂಡಿವೆ ಚಿನ್ಹೆ ಗುರುತಿಲ್ಲದೆ
ಇಲ್ಲಿತನಕ ಆ ಸಮಾಧಿಗಳ ಮೇಲೆ
ಯಾರು ದೀಪ ಮುಡಿಸಿಲ್ಲ—
ಈ ಸುಂದರ ತೋಟ ಈ ಜಮುನಾ ದಂಡೆ
ಈ ತಾಜಮಹಲು
ಚಿತ್ತಾರಗೊಂಡ ಈ ಬಾಗಿಲು, ಈ ಗೋಡೆ,
ಈ ಗುಂಬಜ ಒಬ್ಬ ದೊರೆ ಸುಲಿದ ಸಿರಿವಂತಿಕೆಯ
ಆಶ್ರಯ ಪಡೆದು
ನಮ್ಮಂಥ ಬಡಪಾಯಿಗಳ ಪ್ರೇಮವನ್ನು
ತಮಾಶೆ ಮಾಡಿರುವನು
ಅದಕ್ಕೇ ಪ್ರಿಯೆ— ಇಲ್ಲಿ ಬೇಡ—
ಇನ್ನೆಲ್ಲಿಯಾದರೂ ಭೇಟಿಯಾಗು

ಉರ್ದು ಮೂಲ : ಸಾಹಿರ್ ಲೂದಿಯಾನ್ವಿ
ಅನುವಾದ : ಮುಸಾಹಿರ್ ರಾಯಚೂರಿ

ಜೀತ : ಇನ್ನೂ ಜೀವಂತ

...81 ರಾಷ್ಟ್ರೀಯ ಅಧ್ಯಯನದ ಪ್ರಕಾರ ಇಂಡಿಯಾದಲ್ಲಿ ಈಗಲೂ 2 ದಶಲಕ್ಷಕ್ಕೂ ಮೀರಿ ಕೃಷಿ ಕೂಲಿ ... ಜೀತಪದ್ಧತಿಯ ಬಂಧನದಲ್ಲಿದ್ದಾರೆ. ಒಂದು ಕಡೆ ಏರುವ ಬೆಲೆಗಳು ಮತ್ತೊಂದು ಕಡೆ ಕಡಿಮೆ ...-ಇವು ಅನೇಕ ಕೂಲಿಕಾರರನ್ನು ಸಾಲಕ್ಕೆ ಕೈ ಚಾಚುವಂತೆ ಮಾಡಿ ಉಳ್ಳವರ ಜೀತಗಾರರನ್ನಾಗಿ ... ಒಟ್ಟು ಜೀತಗಾರರಲ್ಲಿ ಶೇ. 66 ಜನ ಹರಿಜನ ಕೋಮಿಗೆ ಸೇರಿದ್ದಾರೆ. ಶೇ. 18.3 ಜನ ಗಿರಿ ...ಇವರನ್ನೆಲ್ಲ ಜೀತಕ್ಕಿಟ್ಟು ಕೊಂಡಿರುವ ಒಡೆಯರ ಒಟ್ಟು ಸಂಖ್ಯೆಯಲ್ಲಿ ಶೇ. 84.2ರಷ್ಟು ಒಡೆಯರು ...ದು ಹಿಂದೂಗಳಾಗಿದ್ದಾರೆ.

ತೂಗುವ ಕತ್ತಿಯ ಕೆಳಗೆ ಹೊಲೆ

ಇತ್ತೀಚಿನ ಸಮೀಕ್ಷೆಯೊಂದು ಭಾರತದಲ್ಲಿ 4 ಸಾವಿರ ಜಾತಿಗಳು, 50 ಸಾವಿರ ಉಪಜಾತಿಗಳಿವೆ ಎಂದು ವರದಿ ಮಾಡಿದೆ. ಅಷ್ಟೇ ಅಲ್ಲ ಅಸ್ಪೃಶ್ಯರಲ್ಲೆ ಸಾವಿರ ಉಪಪಂಗಡಗಳಿವೆ ಎಂದು ತಿಳಿಸಿದೆ. ಜಾತಿ ನಾಶಮಾಡಬೇಕು ಎಂದು ಬಯಸುವ ನನ್ನಂಥವನಿಗೆ ಈ ವರದಿ ಹೃದಯಾಘಾತಕ್ಕಿಂತ ಬಲವಾಗಿದೆ. ಜಾತಿಯಿಂದ ಒಡೆದು ಛಿದ್ರವಾಗಿರುವ ಈ ದೇಶದಲ್ಲಿ ಭಾರತೀಯನೊಬ್ಬನನ್ನು ಇಡಿಯಾಗಿ ಚಿತ್ರಿಸಿಕೊಳ್ಳಲು ಇದುವರೆಗೂ ನನಗೆ ಸಾಧ್ಯವಾಗಿಲ್ಲ. ಭಾರತದ ಪ್ರಥಮ ಪ್ರಜೆ ರಾಷ್ಟ್ರಪತಿಯನ್ನೆ ನೋಡಿ. ಸರ್ಕಸ್ ಕಂಪನಿಯ ಬಫೂನನ ನೆನಪು ಬರುತ್ತದೆ. ಚಿತ್ರವಿಚಿತ್ರ ಉಡುಪನ್ನು ಧರಿಸಿ ಬಫೂನ್, ಸರ್ಕಸ್ ನೋಡಲು ಬಂದ ಎಲ್ಲರನ್ನೂ ರಂಜಿಸುವಂತೆ, ನಮ್ಮ ರಾಷ್ಟ್ರಪತಿ ದೇವಸ್ಥಾನಕ್ಕೆಹೋದರೆಹಿಂದುಗಳಂತೆ, ಚರ್ಚಿಗೆ ಹೋದರೆಕ್ರಿಶ್ಚಿಯನ್ನರಂತೆ, ಮಸೀದಿಗೆ ಹೋದರೆ ಮುಸ್ಲಿಮರಂತೆ, ಅವರವರ ಭಂಗಿಗಳಲ್ಲಿ ಮುಜುರೆ ಮಾಡುವ ರೀತಿ ಕ್ರೂರವೆನಿಸುತ್ತದೆ.

ಮೇಲುಜಾತಿಯ ಕ್ರೌರ್ಯವನ್ನು ಕ್ಷಣಕಾಲ ಮರೆತು, ಕೆಳಜಾತಿಗಳ ಬಗ್ಗೆ ಯೋಚಿಸುವಾ. ಕೆಳಜಾತಿ ಅಸ್ಪೃಶ್ಯರಲ್ಲಿ ಎಂಥ ತಾರತಮ್ಯ ಇದೆ! ಹೊಲೆಯ—ಮಾದಿಗ, ಮೋಚಿ—ಚಮ್ಮಾರ, ಮಾಲ-ಮಾದಿಗ, ಮಹರ್-ಮಾಂಗ್. ಪರಸ್ಪರ ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಆಗುವುದಿಲ್ಲ. ಈಗ್ಗೆ ಕೆಲವು ವರ್ಷಗಳ ಹಿಂದೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನಲ್ಲಿ ಹೊಲೆಮಾದಿಗರಿಗೆ ಕುಡಿಯಲು ನೀರಿರಲಿಲ್ಲ. ಅರಸು ಸರ್ಕಾರದಲ್ಲಿ ಉಪ-ಸಭಾಪತಿಯಾಗಿದ್ದ ಮಂಜುನಾಥ್, ಬಿ.ಡಿ.ಓ. ಅವರನ್ನು ಕರೆಸಿ ಕೇಳಲು, ಹರಿಜನರಿಗೆ ಭಾವಿ ತೋಡಿಸಲಾಯಿತು. ಆದರೆ ಭಾವಿಯಲ್ಲಿ ಮಾದಿಗರು ನೀರು ತುಂಬಿದರೆಂಬ ಕಾರಣಕ್ಕಾಗಿ ಯಾವ ಹೊಲೆಯರೂ ಭಾವಿ ನೀರು

ಮುಟ್ಟಲಿಲ್ಲ. ತರುವಾಯ ಹೊಲೆಯರೆಲ್ಲ
ಟ್ಟಾಗಿ ಕೆ. ಎಚ್. ರಂಗನಾಥ್ ಹತ್ತಿರ
ರು. ರಂಗನಾಥ್ ಹೊಲೆಯರಿಗೆ ಪ್ರ
ಭಾವಿ ತೋಡಿಸಿಕೊಟ್ಟರು.

ಹೋದ ವರ್ಷ ಗುಲಬರ್ಗಾ-ರಾಯಚ
ಬೀದರ್ ಜಿಲ್ಲೆಗಳಲ್ಲಿ ಪ್ರವಾಸ ಮಾಡ
ನನಗೆ ಮತ್ತೊಂದು ವಿಚಿತ್ರ ಕಂಡು
ಹೊಲೆಯರೆಲ್ಲ ಬೌದ್ಧಮತಕ್ಕೆ ಮತಾಂತರ
ತ್ತಿದ್ದರೆ, ಮಾದಿಗರೆಲ್ಲ ಕ್ರಿಶ್ಚಿಯನ್ ಧ
ಮತಾಂತರವಾಗಿ ಅಲ್ಲೂ ತಮ್ಮ ಪ್ರ
ಯನ್ನು ಉಳಿಸಿಕೊಳ್ಳುತ್ತಿದ್ದರು. ಅಂಬೇ
ಹೊಲೆಯರ ನಾಯಕ. ಜಗಜೀವ
ಮಾದಿಗರ ನಾಯಕ ಎಂಬ ಅಪಾ
ಪ್ರಚಾರಗಳಿಗೂ ಕಡಿಮೆ ಇಲ್ಲ. ಏನೂ ಅ
ನಿರಕ್ಷರಕುಕ್ಷಿ ಅಸ್ಪೃಶ್ಯರ ಮನಸ್ಸಿನಲ್ಲಿ

ಅಸ್ಪೃಶ್ಯರೊಳಗಿನ ಭೇದಕ್ಕೆ ಎದಿರೇಟು : ಕೇಬಿ-ಗಂಗ

1981ನೆ ಅಗಷ್ಟ್ ತಿಂಗಳು. ಇಡೀ ಭಾರತ ಮತಾಂತರದ ಸುದ್ದಿಯಿಂದ ತುಂಬಿ ಹೋಗಿತ್ತು. ಸುದ್ದಿಯಿಂದ ಉಸಿರುಕಟ್ಟಿದ್ದ ನನಗೆ, ತಾ.25-8-81ರಂದು ತಿಪಟೂರು ದ.ಸಂ.ಸ. ಶಾಖೆಯಿಂದ ಒಂದು ಕರಪತ್ರ ಬಂತು." ಮತಾಂತರದ ನಡುವೆ ಹೊಸ ಸಮಾಜದ ಕಡೆಗೆ" ಎಂದು ಬರೆಯಲಾಗಿದ್ದ ಕರಪತ್ರದಲ್ಲಿ ಕೆ. ಬಿ. ಸಿದ್ದಯ್ಯ ಗಂಗರಾಜಮ್ಮನವರ ಮದುವೆ. ಸ್ಥಳ: ಸಾಮಾಜಿಕ ಬಹಿಷ್ಕಾರ ಎದುರಿಸಿ ನಿಂತ ನೆಲ ಕುಂದೂರು. ಸಭೆಗೆ ದೇವನೂರುಮಹಾದೇವ, ಲಿಂಗದೇವರು ಹಳೆಮನೆ ಮುಖ್ಯ ಅತಿಥಿಗಳು. ನನ್ನದು ಅಧ್ಯಕ್ಷತೆ. ತಾ. 30ರಂದು ಬೆಳಗ್ಗೆ ನಾನು ತಿಪಟೂರನ್ನು ತಲುಪಿದಾಗ ಇನ್ನೂ 10 ಗಂಟೆ. ಕುಂದೂರಿನಲ್ಲಿ ಹನ್ನೆರಡು ಗಂಟೆ ಹೊತ್ತಿಗೆ ತಿಪಟೂರು, ತುಮಕೂರು, ಮಂಡ್ಯ, ಹಾಸನ ಇತ್ಯಾದಿ ಕಡೆಗಳಿಂದ ಬಂದಿದ್ದ ದ.ಸಂ.ಸ. ಗೆಳೆಯರು ಸೇರಿದ್ದರು. ಸರಳವಾದ ಒಂದು ಚಪ್ಪರ. ಕ್ರಾಂತಿ ಗೀತೆಗಳಿಂದ ತುಂಬಿದ ಧ್ವನಿವರ್ಧಕ. ನಾನು ಮತ್ತು ಲಿಂಗದೇವರು ಹಳೆಮನೆ ಮಾತಾನಾಡುತ್ತಿದ್ದಂತೆ, ಕೆಲವು ಗೆಳೆಯರು ಓಡಿ ಬಂದು ''ಸಾರ್, ಸಾರ್'' ಎಂದು ಕೂಗಿದರು. ಗಾಬರಿಗೊಂಡು ಬರುತ್ತಿದ್ದ ಅವರನ್ನು ಕಂಡು ಏನೋ ಅಚಾತುರ್ಯ ನಡೆದಿರಬೇಕು ಎನ್ನಿಸಿತು. "ಗಂಗರಾಜಮ್ಮನವರ ತಂದೆ-ತಾಯಿ, ಅಣ್ಣ-ತಮ್ಮ ಅತ್ತೆ-ಮಾವ ಬಂದಿದ್ದಾರೆ. ಯಾರನ್ನಕೇಳಿ ಮದ್ವೆ ಮಾಡ್ತಿದ್ದೀರಿ? ಸಂಘದವರು ಇಂಥ ಕೆಲ್ಸನಾ ಮಾಡೋದು? ಅದು ಹೆಂಗೆ ಮದ್ವೆ ಮಾಡ್ತೀರಿ ನಾವೂ ನೋಡೇಬಿಡ್ತೀವಿ'' ಕೂಗಾಡುತಿದ್ದಾರೆ. ಪರಿಸ್ಥಿತಿ ಗಂಭೀರವಾಯಿತು. ಎಲ್ಲರಿಗೂ ಏನಾಗುವುದೋ ಏನೋ ಎಂಬ ಆತಂಕ. ಆಕಸ್ಮಾತ್ ಹುಡುಗಿಯನ್ನು ಎಳೆದುಕೊಂಡು ಹೋದರೆ? ಅಥವಾ ಹುಡುಗಿ ಇವರೆಲ್ಲ ನನ್ನನ್ನು ಬಲವಂತವಾಗಿ ಎಳೆದುಕೊಂಡು ಬಂದರು ಎಂದು ಹೇಳಿದರೆ.? ಪೋಲಿಸರು ಮರದ ಕೆಳಗೆ ನಿಂತಿದ್ದರು. ಮದುವೆ ರಿಜಿಸ್ಟರ್ ಮಾಡಿಸಿದ್ದೀರಾ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಉತ್ತರ ಬಂತು. ಇಂಥ ಮದುವೆಗಳೆಂದರೆ ಸಾಮಾನ್ಯವಾಗಿ ಗಲಾಟೆಗಳಾಗುವ ಸಂದರ್ಭ ಹೆಚ್ಚು. ಆದ್ದರಿಂದ ಬಹಿರಂಗ ಸಭೆ ಮಾಡುವ ಮೊದಲು ಮದುವೆ ರಿಜಿಸ್ಟರ್ ಮಾಡಿಸಿದ್ದರೆ, ಯಾರು ಕೇಳಿದರೂ ಉತ್ತರ ಹೇಳಬಹುದು. ತಿಪಟೂರು ಗೆಳೆಯರು "ನಾವು ಸಿದ್ದಯ್ಯನಿಗೆ ರಿಜಿಸ್ಟರ್ ಮಾಡಿಸೋಣ ಎಂದೆವು. ಆದಕ್ಕೆ ಆತ ಒಪ್ಪಲಿಲ್ಲ'' ಎಂದರು. ಇದನ್ನೆಲ್ಲ ಚರ್ಚೆ ಮಾಡುತ್ತಾ ಕುಳಿತುಕೊಳ್ಳಲು ಸಮಯವಿರಲಿಲ್ಲ. ಲಿಂಗದೇವರು ಮತ್ತು ನಾನು ಸ್ವಲ್ಪ ಚರ್ಚಿಸಿ ಹೊರಗಡೆ ಗಲಾಟೆ ಆಗುವುದು ಬೇಡ ಎಲ್ಲರೂ ಚಾವಡಿಯಲ್ಲಿ ಕುಳಿತುಕೊಳ್ಳೋಣ ಹುಡುಗ-ಹುಡುಗೀನು ಬರಲಿ ಹುಡುಗಿ ತಂದೆ ತಾಯೀನು ಬರಲಿ. ಹುಡುಗಿಗೆ ಇಷ್ಟವಾದರೆ ಹುಡುಗನನ್ನು ಮದುವೆಯಾಗಲಿ. ಇಲ್ಲದಿದ್ದರೆ ಅಪ್ಪಅಮ್ಮನ ಜೊತೆ ಹೊರಟು ಹೋಗಲಿ ಎಂದೆವು. ಎಲ್ಲರೂ ಒಪ್ಪಿದರು. ಹುಡುಗಿ ತಮ್ಮ ಮತ್ತು ಮಾವ ಕೂಗಾಡುತ್ತಿದ್ದರು. ಪಂಚಾಯಿತಿ ಕಟ್ಟಿಕೊಂಡು ನಮಗೇನು? ನಮ್ಮ ಹುಡುಗಿ

"ನಾನು ನಮ್ಮಪ್ಪನನ್ನು ಕೇಳಿದೆ.
ಹೊಲೇರು, ಅವನ ನೋಡಿದ್ರೆ ಮಾ
ನಾನು ಅವರನ್ನು ಒಪ್ಪಿಸಲು ಪ್ರಯ
ಒಂದೇ ಎಂದು ಹೇಳ್ತಿವಿ. ಆದರೆ ನ
ಮೇಲು ಕೀಳನ್ನು ಪ್ರತಿಭಟಿಸಿ ನ
ಸಿದ್ದೇನೆ. ನನ್ನನಿರ್ಧಾರವನ್ನುಬದಲಾ
ಮುಖದಲ್ಲಿ ನಿರ್ಧಾರವಿತ್ತು, ಛಲವಿತ

ಎಲ್ಲಿದ್ದಾಳೆ ತೇಗಿರಿ". ಎಲ್ಲರೂ ದೇವಸ
ಸೇರಿದೆವು; ಗಂಗರಾಜಮ್ಮನವರ ತಂದೆ
ದವರು ಇಂಥ ಕೆಲಸ ಮಾಡಬಹುದಾ?
ಮಗಳನ್ನು ಸಂಘಕ್ಕೆ ಮೆಂಬರ್ ಮಾಡಿ
ಇದನ್ನಾ ಹೇಳಿಕೊಟ್ಟದ್ದು? ನಮ್ಮನ್ನ
ನಾವೇ ಮದ್ವೆ ಮಾಡಿಕೊಡ್ತಿದ್ವಿ''
ಹೊತ್ತಿಗೆ ಗಂಗರಾಜಮ್ಮ ಒಂದರು.
ಕುಳಿತಿದ್ದ ಗಂಗರಾಜಮ್ಮನ ಅಕ್ಕ
ಅಂದರು. ಮೂಲೆಯಲ್ಲಿ ಕುಳಿತಿದ್ದ
ತಾಯಿ ಮುಖ ಮುಚ್ಚಿಕೊಂಡರು. ಗಂ
ಮ್ಮನ ಕಣ್ಣು ಹನಿಗೂಡಿದವು. ಆಕೆಯ
ಉದ್ವೇಗದಿಂದ ಹೇಳುತ್ತಿದ್ದ. "ನಮ್ಮ
ಓದ್ಸಿ ದೊಡ್ಡೋಳ್ನ ಮಾಡಿದ್ವಿ ಆ ನೋವು
ಗೆ ಗೊತ್ತು. ಈ ಹೊತ್ತು ಓಡಿಬಂದು
ನ್ನೊ ಕಟ್ಟಿಕೊಂಡ್ರು ಅಂದ್ರೆ ನಮಗೆ ವ
ಬಂತಾ? ನಮ್ಮ ಜ್ಯಾತ್ಯಸ್ರ ಮಧ್ಯೆ

ದಿಗರ ಕಿತ್ತಾಟ!

ಬೀಜಗಳನ್ನು ಅಸ್ಪೃಶ್ಯ ರಾಜಕಾರಣಿಗಳು, ಕರವರ್ಗ ಬಿತ್ತುತ್ತಿದ್ದಾರೆ. ಅವರಿಗೆ ತಮ್ಮ ದೆ ಬಿದ್ದಿರುವ ಅಸಂಖ್ಯ ಅಸ್ಪೃಶ್ಯರ ಬಗ್ಗೆ ಕಳ ಇದ್ದಂತಿಲ್ಲ. ಬಸವಲಿಂಗಪ್ಪ ಮಂತ್ರಿಯಾದರೆ ಲೆಯರೆಲ್ಲ ಕೂಡಿ ಸನ್ಮಾನ ಸಮಾರಂಭ ಡುತ್ತಾರೆ. ಮಾದಿಗರೆಲ್ಲ ರಾಚಯ್ಯನವರಿಗೆ ್ಮಾನ ಮಾಡುತ್ತಾರೆ. ಮಾದಿಗರು ಹೊಲೆಯ ತ್ರಿಯನ್ನು, ಹೊಲೆಯರು ಮಾದಿಗ ಮಂತ್ರಿ ನ್ನು ಸನ್ಮಾನ ಮಾಡಿದ ಉದಾಹರಣೆಗಳು ವರೆಗೂ ಇಲ್ಲ. ಒಂದೊಂದು ಉಪಜಾತಿ ನಲ್ಲಿ ಮಂತ್ರಿ ಪದವಿ ಗಿಟ್ಟಿಸಿಕೊಳ್ಳಲು ಕ್ಯೂ ರುವ ಈ ಜನಕ್ಕೆ ಅಸ್ಪೃಶ್ಯರು ಒಂದಾಗು ಬೇಕಿಲ್ಲ. ಇತ್ತೀಚೆಗೆ ಮಾಜಿ ಮಂತ್ರಿ ಕಾ ರಾಜೇಂದ್ರನ್ ಅಸ್ಪೃಶ್ಯರಲ್ಲಿ ಈ ಬಿರು ಬಹಿರಂಗವಾಗಿ ಸ್ಫೋಟಗೊಳಿಸಿದ್ದಾರೆ

ಹೊಲೆಯರು ಸಮಾಜಕಲ್ಯಾಣ ಮಂತ್ರಿ ವೆಂಕಟರಮಣರಿಗೆ ಸನ್ಮಾನ ಏರ್ಪಡಿಸಿದ್ದರು. ಸಮಾರಂಭಕ್ಕೆ ಉಳಿದೆಲ್ಲ ಮಂತ್ರಿಗಳನ್ನು ಕರೆದಿದ್ದು ವೈ. ರಾಮಕೃಷ್ಣ ಅವರನ್ನು ಮಾತ್ರ ಕರೆದಿರಲಿಲ್ಲ.ಕಾರಣ ಆತ ಮಾದಿಗರವನು. ರೇಣುಕಾ

ಬಿ. ಕೃಷ್ಣಪ್ಪ

ರಾಜೇಂದ್ರನ್ ಕರೆದದ್ದು ಯಾಕೆ ಎಂದರೆ, ಆಕೆ ಮಾದಿಗರವಳಾದರೂ ಹೊಲೆಯರವನನ್ನು ಮದುವೆಯಾಗಿದ್ದಾಳೆ. ಇದು ಹೊಲೆಮಾದಿಗರಲ್ಲಿ ಬಿಸಿ ವಾತಾವರಣವನ್ನು ಕೆದಕಿತು.

ಇತ್ತೀಚೆಗೆ ಹೊಲೆಮಾದಿಗರು ಜಾತಿ ಸಂಘಟನೆಗಳನ್ನು ಕಟ್ಟಲು ದೊಡ್ಡ ಪೈಪೋಟಿ ನಡೆಸಿದ್ದಾರೆ. ಎಕ್ಸಿಕ್ಯುಟಿವ್ ಎಂಜಿನಿಯರ್ ಶ್ರೀ ಶಿವಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಹೊಲೆಯರೆಲ್ಲ ಬ್ಯಾಂಕ್ ಮಾಡಲು ಹೊರಟಿದ್ದರೆ, ಮಾಜಿ ಲೋಕಸೇವಾ ಆಯೋಗದ ಅಧ್ಯಕ್ಷ ಶ್ರೀ ಜಿ.

ಸಂಘಟನೆ-ಹೋರಾಟ

ದುಗ್ಗಪ್ಪನವರ ಅಧ್ಯಕ್ಷತೆಯಲ್ಲಿ ಮಾದಿಗರೆಲ್ಲ "ಆದಿಜಾಂಬವ ಫೈನಾನ್ಸ್ ಕಾರ್ಪೋರೇಷನ್'' ಮಾಡಲು ನಿರ್ಧರಿಸಿರುವುದಾಗಿ ವದಂತಿಯಾಗಿದೆ.

ಅಸ್ಪೃಶ್ಯ ಸಮಾಜವನ್ನು ಇಡಿಯಾಗಿ ಕಲ್ಪಿಸಿಕೊಳ್ಳುವ, ಅವರ ಸಮಗ್ರ ಬಿಡುಗಡೆಗಾಗಿ ಹೋರಾಡುವ, ಪೂರ್ಣ ವ್ಯಕ್ತಿತ್ವ ಪಡೆದುಕೊಂಡ ಅಸ್ಪೃಶ್ಯ ರಾಜಕಾರಣಿಯೊಬ್ಬ ದುರ್ಬೀನು ಹಾಕಿ ಹುಡುಕಿದರೂ ಈ ದೇಶದಲ್ಲಿ ಸಿಕ್ಕುವುದಿಲ್ಲ. ಅಸ್ಪೃಶ್ಯತೆ ಆಚರಿಸುವ ಅಸ್ಪೃಶ್ಯರಿಗೆ, ಅಸ್ಪೃಶ್ಯತೆ ವಿರುದ್ಧ ಮಾತನಾಡುವ ಯಾವ ನೈತಿಕ ಹಕ್ಕಿದೆ? ಹೀಗೆಲ್ಲ ಚಿಂತಿಸುವ ನನಗೆ, ಅಸ್ಪೃಶ್ಯರ ಸಮಗ್ರ ಬಿಡುಗಡೆಗೆ ಉಳಿದಿರುವ ಏಕೈಕ ಆಶೆ ದಲಿತ ಸಂಘರ್ಷ ಸಮಿತಿ ಎನ್ನಿಸುತ್ತದೆ.

ರಳ ಮದುವೆ

ಕೇಳಿದೆ ಅವರು—ನಾವು ನೋಡಿದ್ರೆ ಮದುವೆ ಸಾಧ್ಯವೇ ಇಲ್ಲ ಎಂದರು. ತೆ. ನಾವು ಹೋಲೇರು ಮಾದಿಗರು ಈ ಮೇಲು ಕೀಳು ಯಾಕೆ? ಇಂಥ ನನ್ನು ಮದುವೆಯಾಗಲು ನಿಶ್ಚಯಿ ರಿಂದಲೂಸಾಧ್ಯವಿಲ್ಲ"ಗಂಗರಾಜಮ್ಮನ

ಎತ್ತಿಕೊಂಡು ಬದುಕೋದು ಬ್ಯಾಡ್ವಾ'' ಗರಾಜಮ್ಮನನ್ನು ಕುರಿತು ನಿನಗೆ ನಿನ್ನ ಅಪ್ಪ, ಬೇಕಂದ್ರೆ ಈಗ್ಲೆ ಬಂದುಬಿಡು. ಇಲ್ಲದಿದ್ರೆ ಮ್ಮಪಾಲಿಗೆ ಸತ್ತೆ ಅಂತ ತಿಳ್ಕೋತೀವಿ." ಅವರಕ್ಕ ನಾವೊನ್ನ ಕಟ್ಕೊಂಡುಹೆತ್ತ, ಹೊಟ್ಟೇಗೆ ಬೆಂಕಿ ವ್ವಿ್ಯೇಯಾ? ಮರ್ಯಾದೇನ ಮೂರೂ ಕಾಸ್ಗೆ ದ್ದೆ ಹಾಳುಮುಂಡೆ ನಿನ್ನ ಮನಸಿಗೆ ಬಂದಾಗೆ ಮಾಡಿ ಕೋಡ್ತಿವಿ ಬಾ ಹೋಗಾನ.''

ನಾನು "ನೋಡಿ, ನೀವು ಹೇಳ ಬೇಕಾದ್ದನ್ನ ದ್ದೀರಿ ಇಲ್ಲಿಗೆ ಸಾಕು. ಗಂಗರಾಜಮ್ಮ ಏನು ತ್ತಾರೋ ಅದು ಮುಖ್ಯ. ಗಂಗರಾಜಮ್ಮ ನಿಮ್ಮ ಅಭಿಪ್ರಾಯ ಹೇಳಿ. ಅವರ ತಂದೆ ಯರನ್ನು ಕುರಿತು "ನಿಮ್ಮ ಮಗಳು ಈ ವೆ ಬೇಡ ನಾನು ಹೋಗ್ತೀನಿ ಅಂದ್ರೆ ಕೊಂಡು ಹೋಗ್ರಿ. ಇಲ್ಲ ನಾನು ಮದುವೆ ಆಗ್ತಿನಿ ಅಂದ್ರೆ ನೀವು ಯಾರೂ ಉಸಿರು ಎತ್ತದೆ ಸುಮ್ಮನಿರಬೇಕು'' ಎಂದೆ. ಗಂಗ

ರಾಜಮ್ಮ ಎದ್ದುನಿಂತರು. ಆಕೆಯ ಕಣ್ಣಂಚಿನಲ್ಲಿ ನೀರು ತೊಟ್ಟಿಕ್ಕಿತು. ಒಂದು ಕಡೆ ಹೆತ್ತು ಸಾಕಿದವರು ಮತ್ತೊಂದು ಕಡೆ ಒಲಿದು ಬಯಸಿದವನು ಆಕೆ ಒತ್ತಿ ಬರುತ್ತಿದ್ದ ದುಃಖ ನುಂಗಿಕೊಂಡಳು. ನಿಷ್ಠುರವಾಗಿ ಮಾತಾನಾಡಿದಳು. "ನಮ್ಮಪ್ಪ ನಮ್ಮಣ್ಣ ಈ ಮದುವೆ ಬಗ್ಗೆ ನಮಗೆ ತಿಳಿಸಿದ್ದರೆ ನಾವೇ ಮಾಡಿಕೊಡ್ತಿದ್ವಿ ಅಂತಾರೆ. ನಾನು ನಮ್ಮಪ್ಪನನ್ನು ಕೇಳಿದೆ ನಮ್ಮಣ್ಣನನ್ನು ಕೇಳಿದೆ. ಅವರು ನಾವು ನೋಡಿದ್ರೆ ಹೊಲೇರು. ಅವನು ನೋಡಿದ್ರೆ ಮಾದಿಗರೋನು ಈ ಮದುವೆ ಸಾಧ್ಯವೆ ಇಲ್ಲ ಎಂದರು. ನಾನು ಅವರನ್ನು ಒಪ್ಪಿಸಲು ಪ್ರಯತ್ನ ಮಾಡಿ ಸೋತೆ. ನಾವು ಹೊಲೇರು ಮಾದಿಗರು ಒಂದೇ ಎಂದು ಹೇಳ್ತೀವಿ. ಆದರೆ ನಮ್ಮ ನಮ್ಮಲ್ಲೆ ಈ ಮೇಲು-ಕೀಳು ಯಾಕೆ? ಹೊಲೆಮಾದಿಗರಲ್ಲಿರುವ ಇಂಥ ಮೇಲು ಕೀಳನ್ನು ಪ್ರತಿಭಟಿಸಿ ನಾನು ಸಿದ್ದಯ್ಯನನ್ನು ಮದುವೆಯಾಗಲು ನಿಶ್ಚಯಿಸಿದ್ದೇನೆ. ನನ್ನ ನಿರ್ಧಾರವನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ." ಗಂಗರಾಜಮ್ಮನ ಮುಖದಲ್ಲಿ ನಿರ್ಧಾರವಿತ್ತು, ಛಲವಿತ್ತು. ಗಂಗರಾಜಮ್ಮ ಹೊಲೆಯರ ಹೊಲೆತನಕ್ಕೆ, ಸಿದ್ದಯ್ಯ ಮಾದಿಗರ ಮಾದಿಗತನಕ್ಕೆ ಬಲವಾದ ಏಟುಕೊಟ್ಟಿದ್ದರು.

ಅಕ್ಕಪಕ್ಕದ ಹಳ್ಳಿಗಳಿಂದ ಬಂದಿದ್ದ ಹೊಲೆ ಮಾದಿಗರು ಇಂಥ ಸರಳ ಮದುವೆಯನ್ನು ಕಂಡು ಮೂಕವಿಸ್ಮಿತರಾದರು. ಹಳ್ಳಿಗರ ಮೇಲೆ ಮದುವೆ ಮಾಡಿದ ಪರಿಣಾಮ ಅದ್ಭುತವಾಗಿತ್ತು. ಹಳ್ಳಿ ಹೆಣ್ಣುಮಕ್ಕಳು ತಾವೇ ಮುಂದೆ ಬಂದು ಹುಡುಗಿಗೆ ಸೆರಗು ಹೊದಿಸಿದರು. ದ.ಸಂ.ಸ. ಗೆಳೆಯರು ಹರ್ಷೋದ್ಗಾರದಿಂದ "ದಲಿತ ಕ್ರಾಂತಿ ಚಿರಾಯುವಾಗಲಿ'' ಎಂದು ಕೂಗುತ್ತಿದ್ದರು. ಆ ಕೂಗು ನಾಡಿನ ಮೂಲೆ ಮೂಲೆಯನ್ನು ತಲುಪಬೇಕಾಗಿದೆ. ಅಸ್ಪೃಶ್ಯ ಯುವಕ-ಯುವತಿಯರು ತಮ್ಮ ದನಿ ಕೂಡಿಸಬೇಕಾಗಿದೆ.

ದಕ್ಷಿಣ ಆಫ್ರಿಕಾದಲ್ಲಿ ಸಂಸ್ಕೃತಿ ಮತ್ತು ವಿಮೋಚ

ರಂಜಾನ ದರ್ಗಾ

ಸಂಸ್ಕೃತಿಯೆನ್ನುವದು ಮಾನವನ ಸೃಜನಶೀಲ ಪ್ರತಿಭೆಯಿಂದ ಹುಟ್ಟಿರುವಂಥದ್ದರ ಒಟ್ಟುಮೊತ್ತ. ಈ ಸೃಜನ ಶೀಲತೆ ಸಾಮೂಹಿಕವಾಗಿರುತ ದೆ. ಪ್ರತಿ ಸಮಾಜವೂ ಸಂಸ್ಕೃತಿಯನ್ನು ಹೊಂದಿರುತ್ತದೆ. ಕೆಲವು ಸುಲಿಗೆಯ ರಕ್ಷಣೆ ಮಾಡುತ್ತವೆ. ಮತ್ತೆ ಕೆಲವು ಹಾಗಿರುವುದಿಲ್ಲ. ಎಲ್ಲಾ ಸಂಸ್ಕೃತಿಗಳು ಸಾಮಾಜಿಕ ಹಾಗೂ ರಾಜಕೀಯ ತಳಹದಿಯನ್ನ ಪಡೆದುಕೊಂಡಿರುತ್ತವೆ.

ಕಲೆ ಮತ್ತು ಶಿಕ್ಷಣಗಳು ಜನಾಂಗವೊಂದರ ಮೌಲ್ಯಗಳ ಮತ್ತು ಸಂಸ್ಕೃತಿಯ ಅಭಿವ್ಯಕ್ತಿಗಳಾಗಿರುತ್ತವೆ. ಪ್ರಾಚೀನ ಮಾಲಿ ದೇಶದ ಮಹಾಕಾವ್ಯಗಳಲ್ಲೊಂದಾದ "ಸಂಡಿಯಾತಾ"ದಲ್ಲಿ griot ತನ್ನನ್ನು ತಾನೇ ಗುರುತಿಸಿಕೊಳ್ಳಲು ಪ್ರಾರಂಭಿಸುತ್ತಾನೆ. ಆ ಗುರುತಿಸಿಕೊಳ್ಳುವ ಕ್ರಿಯೆ ಅವನ ವಂಶಕ್ಕಷ್ಟೇ ಸೀಮಿತವಾಗಿರದೆ, ಸಮಾಜದೊಡನೆ ಇರುವ ಅವನ ಸಂಬಂಧಗಳು ಹಾಗೂ ಅವನ ಪಾತ್ರದಲ್ಲಿರುವ ಸಾಮರ್ಥ್ಯ ಹೀಗೆ ಎಲ್ಲವನ್ನು ಕ್ರೋಢೀಕರಿಸುತ್ತ ಹೋಗುವುದು. ಮತ್ತು ಕೊನೆಯಲ್ಲಿ "ನಾನು ನನ್ನ ಜನತೆಯ ಇತಿಹಾಸದ ಸಂಪುಟ''ಎಂದು ಗುರುತಿಸಿಕೊಂಡು, ಭವಿಷ್ಯವನ್ನು ರೂಪಿಸುವುದಕ್ಕಾಗಿ ವರ್ತಮಾನದಲ್ಲಿ ದೂರದೃಷ್ಟಿಯ ಸ್ಪಷ್ಟತೆ ಪಡೆದುಕೊಳ್ಳಲು ತರುಣ ಜನಾಂಗಕ್ಕೆ ಗತಕಾಲದ ಬಗ್ಗೆ ಹೇಳಿಕೊಡುತ್ತಾನೆ. ಇಲ್ಲಿ ಕಲೆ ಕಲಿಸುವಂಥದ್ದಾಗಿ ಕವಿ ಇತಿಹಾಸಕಾರ, ತತ್ವಜ್ಞಾನಿಯಾಗಿ griot ಕಲಿಸುವುದನ್ನು, ನಾವಿಲ್ಲಿ ಕಾಣಬಹುದು ಯಾವುದೇಸಂಪ್ರದಾಯ ಬದ್ಧಆಫ್ರಿಕಾ ಸಮಾಜದ ಕವಿ ಈ ತೆರನಾಗಿ ಚಿಂತಿಸುತ್ತಾನೆ.

ಯಾವುದರಿಂದ ಸಾಂಪ್ರದಾಯಕ ಸಮಾಜ ಬದುಕಿತೊ ಅಂಥ ಮೌಲ್ಯಗಳ ಪ್ರಸಾರಕ್ಕಾಗಿ ಅನುಕೂಲವಾಗುವಂತೆ ಸಂಪ್ರದಾಯಬದ್ಧ ಸಾಂಸ್ಕೃತಿಕ ಸಂಸ್ಥೆಗಳು ಬದುಕಿದ್ದನ್ನು ಕೂಡ ನಾವಿಲ್ಲಿ ಕಾಣುತ್ತೇವೆ. ಆದರೆ ವಸಾಹತುಶಾಹಿಗಳು ಮತ್ತು ಸಾಮ್ರಾಜ್ಯಶಾಹಿಗಳು ಈ ಸಂಸ್ಥೆಗಳನ್ನುನಾಶಮಾಡಲು ಪ್ರಯತ್ನಪಟ್ಟರು ಮತ್ತು ಇಂದಿಗೂ ಪ್ರಯತ್ನಿಸುತ್ತಲೇ ಇದ್ದಾರೆ.

ಕಲೆಯನ್ನು ಆದರ ಸಾಮಾಜಿಕ-ಆರ್ಥಿಕ ತಳಹದಿ ಮತ್ತು ಸಮಯೋಚಿತವಾದ ಸಂದರ್ಭದಿಂದ ದೂರ ಸರಿಸಿ ''ಕಲೆಗಾಗಿ ಕಲೆ'', "ಶುದ್ಧ ಸಾಹಿತ್ಯ" ಮುಂತಾದವುಗಳಂಥ ನಿಗೂಢ ಮಾತುಗಳೊಂದಿಗೆ ತೀರ ಕೀಳುಮಟ್ಟದಲ್ಲಿ ನಿಲ್ಲಿಸಲು ವಸಾಹತುವಾದಿ ಮತ್ತು ಸಾಮ್ರಾಜ್ಯವಾದಿ "ಸಂಸ್ಕೃತಿ ನಿರ್ಮಾಪಕರು" ಐತಿಹಾಸಿಕವಾಗಿ ಪ್ರಯತ್ನಿಸಿದ್ದಾರೆ. ''ಆಳುವವರ ಇಚ್ಛೆಯಂತೆ ನಾಟಕ, ಹಾಡು, ಕವಿತೆ ಮತ್ತು ಒಟ್ಟಾರೆ ಕಲೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ರಾಜಕೀಯದಿಂದ ದೂರವಿಡಲಾಗಿದ್ದು, ಇದರಿಂದ ಅವರ ಪ್ರಶ್ನಾತೀತವಾದ ಪ್ರಾಬಲ್ಯದ ಸ್ಥಿತಿಯ ಸಂರಕ್ಷಣೆಯಾಗುವುದು'' ಎಂದು ಡೆವಿಡ್ ಲುಡೆನ್ "ದಕ್ಷಿಣಾಫ್ರಿಕೆಯಲ್ಲಿ ಸಾಮ್ರಾಜ್ಯವಾದ ಮತ್ತು ಶಾಂತಿ'' ಎಂಬ ಗ್ರಂಥದಲ್ಲಿ ಹೇಳುತ್ತಾರೆ. ಆದರೆ ನಾವು ಲುಡೆನ್‌ಗಿಂತಲೂ ಹೆಚ್ಚು ಎಚ್ಚರಿಕೆಯಿಂದ ಇರಬೇಕಾಗಿದೆ. ಮೂಲಭೂತವಾಗಿ ಕಲೆಯು ಜನತೆಯ ಬಗ್ಗೆ ಮತ್ತು ಜನರ ಸಲುವಾಗಿ ಇರುತ್ತದೆ. ಸಂಗೀತ, ಹಾಡು ಮತ್ತು ಕುಣಿತಗಳು ಕೂಡ ಸಾಮಾಜಿಕ ಉದ್ದೇಶಗಳನ್ನು ಈಡೇರಿಸುತ್ತವೆ. ಕಲೆಯ ಯಾವುದೇ ಗಂಭೀರವಾದ ವಿಶ್ಲೇಷಣೆಯಲ್ಲಿ "ಸಾಮಾಜಿಕ ಉದ್ದೇಶ" ಅಂದರೆ ಕಲಾತ್ಮಕ ಅಭಿವ್ಯಕ್ತಿಯ ನಂಬಿಕೆಗೆ ಅರ್ಹವಾಗಿದ್ದು, ಪಲಾಯನವಾದಿ ಕಲ್ಪನೆಯಿಂದ ಕೂಡಿರದೆ ವಾಸ್ತವತೆಯ ಮೇಲೆ ನಿಂತಿದ್ದರೆ ಆದು ಕೊನೆಯಲ್ಲಿ ಯಾವಾಗಲೂ ರಾಜಕೀಯವೇ ಆಗಿರುತ್ತದೆ ಎಂದು ಅರ್ಥ. ಇದನ್ನು ಇನ್ನೂ ವಿವರಿಸೋಣ : ಕಲಾಕಾರನೊಬ್ಬ ಬರೆಯಲು ಕುಳಿತಾಗ, ರಾಗ ಸಂಯೋಜನೆ ಮಾಡುವಾಗ, ಚಿತ್ರಿಸಲು ಕುಂಚವನ್ನು ತೆಗೆದುಕೊಳ್ಳುವಾಗ ಅಥವಾ ಏನನ್ನಾದರೂ ಸೃಷ್ಟಿಸುವ ಪೂರ್ವದಲ್ಲಿ ನಿಶ್ಚಿತವಾದ ಮೌಲ್ಯಗಳಿಗೆ ಬದ್ಧನಾಗಿರುತ್ತಾನೆ. ಆದ್ದರಿಂದ ಕಲಾಕಾರ ಸೃಷ್ಟಿಸುವಂಥದ್ದು ನಿಶ್ಚಿತವಾದ ಮೌಲ್ಯಗಳನ್ನುಪುರಸ್ಕರಿಸುವದು ಇಲ್ಲವೆ ತಿರಸ್ಕರಿಸುವುದು ಆಗಿರುತ್ತದೆ. ಹೀಗಾಗಿ ಪ್ರತಿಯೊಂದು ಸಾಂಸ್ಕೃತಿಕ ಕಲಾವಸ್ತು ಅದರ ನಿರ್ಮಾಪಕನ ರಾಜಕೀಯ ತತ್ವನಿಷ್ಠೆಯ ಮೇಲೆ ಖಚಿತವಾದ ವ್ಯಾಖ್ಯಾನವಾಗಿರುತ ದೆ

ಜನಾಂಗದ ಮಧ್ಯ ಸಂಪರ್ಕಸಾಧನವಾಗಿ ಭಾಷೆಯು ಸಂಸ್ಕೃತಿಯ ಎಲ್ಲಾ ಅಂಗೀಕಾರಕ ಲಕ್ಷಣಗಳಮೂರ್ತ ಸ್ವರೂಪವಾಗಿರುತ್ತದೆ. ಅದು ಉತ್ಪಾದನೆ ಮತ್ತು ಉತ್ಪಾದನಾ ಸಂಬಂಧಗಳಿಗೆ ಸಹಾಯಕವಾಗಿರುತ್ತದೆ ಮತ್ತು ಜನಾಂಗವೊಂದರ ಶೈಕ್ಷಣಿಕ ಅಭಿವೃದ್ಧಿಗೆ ಅನುಕೂಲವಾಗಿರುತ ದೆ ಅಲ್ಲದೆ ಅದು ಕಾವ್ಯದಲ್ಲಿ ತನ್ನ ತೀವ್ರತೆಯನ್ನು ವ್ಯಕ್ತಪಡಿಸುತ ದೆ. [ಕಾವ್ಯದಲ್ಲಿ ಸರಳವಾದ ಮತ್ತು ಜನಜನಿತವಾದ ಕೆಲವೇ ಶಬ್ದಗಳಿಂದ ತೀವ್ರತರವಾದ ಭಾವಸ್ಫುರಿಸಲು ಅವಕಾಶವಿದೆ.]

ಕವಿ ನೆಟೊ [ದಿವಂಗತ ಆಗಸ್ತಿನೊ ನೆ
ಅಂಗೋಲಾದ ಸ್ವಾತಂತ್ರ್ಯಹೋರಾಟದ ನೇತೃ
ವಹಿಸಿದ್ದರು ಮತ್ತು ಅಂಗೋಲಾ ಸ್ವತಂತ್ರವ
ಮೇಲೆ ರಾಷ್ಟ್ರಾಧ್ಯಕ್ಷರೂ ಆಗಿದ್ದರು] ಅ
ಕೃತಿಗಳಲ್ಲಿ-ಬಲವಂತವಾಗಿ ದುಡಿಮೆಗೊಳಗ
ಕೂಲಿಯ ಬಗೆಗೆ ಬರೆಯುವಾಗ ಅಥ
ಪೋರ್ಚುಗೀಜುವಸಾಹತುವಾದ ಮತ್ತು ಫ್ಯಾಸಿ
ವಿರುದ್ಧ ಅಂಗೋಲಾದ ಜನತೆಯನ್ನು ಉದ್ದೇ
ಬರೆಯುವಾಗ ಕೂಡ--ಚಿಲ್ಲರೆ ಭಾವುಕತೆ ಅಥ
ಕೀಳುಮಟ್ಟದ ಉದ್ವೇಗವಿರಲಿಲ್ಲ. ಅವರು ವಿಮೆ
ಚನೆಗೆ ಬದ್ಧರಾಗಿದ್ದರು ಆದ್ದರಿಂದ ಅವ
ಶಬ್ದ ಗಳೊಂದಿಗೆ ಆಟವಾಡುವ ಅವಶ್ಯಕತೆ
ಲ್ಲಿಲ್ಲ.

"ನಮ್ಮ ದೇಶದ ಉತ್ಪಾದನಾ ಶಕ್ತಿ
ವಿಮೋಚನೆಯಾಗಲಿ, ನಮ್ಮ ದೇಶದಲ್ಲಿರು
ಎಲ್ಲ ಪ್ರಕಾರದ ಸಾಮ್ರಾಜ್ಯಶಾಹಿ ಅಥವ
ವಸಾಹತುಶಾಹಿ ದಬ್ಬಾಳಿಕೆ ಕೊನೆಗೊಳ್ಳ
ಮತ್ತು ನಮ್ಮ ಜನತೆಯ ಸುಲಿಗೆಯು ಹೊ
ರೀತಿಯಲ್ಲಿ ನಡೆಯದಂತೆ ತಡೆಗಟ್ಟಲು ಪ್ರತಿ ರೀ
ಯ ಪ್ರಯತ್ನಗಳಾಗಲಿ'' ಎಂಬ ಪ್ರತಿಭಟನ
ಆಫ್ರಿಕಾ, ಏಷಿಯಾ, ಲ್ಯಾಟಿನ್‌ಅಮೇರಿಕಾ
ಕ್ಯಾರಿಬೀಯನ್ ಮತ್ತು ಉತ್ತರ ಅಮೇರಿಕ
ದಲ್ಲಿ ಕೂಡ ಕೇಳಿಬರುತ್ತದೆ. ಇಂಥ ಪರಿಸ್ಥಿತಿಯ
ತಮ್ಮ ಜನತೆಯ ಸಾಮೂಹಿಕ ಸೃಜನಶೀಲ
ಯನ್ನು ಅಂದರೆ ಅವರ ಸಂಸ್ಕೃತಿಯನ್ನು ಉಸ
ರುವ ಸಾಹಿತಿಗಳು ಮತ್ತು ಇತರೆ ಕಲಾಕಾರ
ಕ್ರಾಂತಿಕಾರಕ ಬದಲಾವಣೆಯ ದುಡಿಮೆಯ
ಯಾರಹೊರತಾಗಿ ಕ್ರಾಂತಿಕಾರಕ ಬದಲ
ವಣೆಯಾಗುವುದಿಲ್ಲವೊ ಆ ರೈತ ಮತ್ತು
ಶ್ರಮಜೀವಿಗಳು ಮತ್ತು ಜನ ಸಮುದಾಯಕ್ಕಿಂ
ಯಾವುದೇ ರೀತಿಯಿಂದ ಕಡಿಮೆಯವರೇನಲ್ಲ.

ಆಫ್ರಿಕಾದ ಜನತೆ ಪೋರ್ಚುಗೀಜ, ಫ್ರೆಂಚ
ಅಮೇರಿಕನ್, ಬೆಲ್ಜಿಯನ್ ಮತ್ತು ಬ್ರಿಟಿಷ
ಸಾಮ್ರಾಜ್ಯಶಾಹಿಗಳದುರಾಡಳಿತದ ಸುಲಿಗೆಯ
ಬಿಳಿಯರ ಸರ್ವಾಧಿಕಾರದ ನರಕದಲ್ಲಿ-ಸಿಕ್ಕು
ಒದ್ದಾಡಿದೆ. ನವ ವಸಾಹತುಶಾಹಿಗಳು, ಸಾಮ್ರಾ
ಜ್ಯಶಾಹಿಗಳು ಆರ್ಥಿಕ, ರಾಜಕೀಯ, ಸೈನಿ
ಮತ್ತುತಾತ್ವಿಕ ಹಿನ್ನೆಲೆಯಲ್ಲಿ ವಸಾಹತುಗಳನು
ದಾರಿದ್ರ್ಯದ ಅಂಚಿಗೆ ನಿಲ್ಲಿಸಿ ಅವು ಆರ್ಥಿಕವಾಗಿ
ಸಾಮಾಜಿಕವಾಗಿ ಅಲ್ಲದೆ ಸಾಂಸ್ಕೃತಿಕವಾಗಿ ಪರ
ವಲಂಬಿಗಳಾಗುವಂತೆ ಮಾಡಿದ್ದಾರೆ.

ಸಂಸ್ಕೃತಿಯನ್ನು ಸಂಕೋಲೆಗಳಿಂದ ಬಂ

ಸಾಧ್ಯವೇ? ಹೀಗಾಗಲು ಸಾಧ್ಯವೇ ಇಲ್ಲ ಕ್ಟೋಬರ್ ೧೯೧೭ರ ಸೋವಿಯತ್ ದೇಶದ ಾಜವಾದಿ ಮಹಾಕ್ರಾಂತಿಯ ನಂತರ ಗೋಳದ ರೂಪ ಬದಲಾಗುತ್ತಿರುವುದೇ' ಕ್ಕೆ ಸಾಕ್ಷಿ.[ಅಕ್ಟೋಬರ್ ಕ್ರಾಂತಿಯ ನಂತರ ಸಾಮ್ರಾಜ್ಯಶಾಹಿಯ ದುರಾಡಳಿತಕ್ಕೊಳ ಪಟ್ಟ ಕ್ಕೂ ಹೆಚ್ಚು ವಸಾಹತುಗಳು ರಶಿಯನ್ ತಿಯ ಮಾರ್ಗದರ್ಶನಕ್ಕೆ ಮತ್ತು ಅವಿರತ ರಾಟದ ಮೂಲಕ ಸ್ವತಂತ್ರ ರಾಷ್ಟ್ರಗಳಾಗಿ ರ್ಪಟ್ಟವು].

ನಾನೊಬ್ಬ ಕ್ಯಾನ್ಸರ್' ಎಂದು
ನಿನ್ನಷ್ಟಕ್ಕೇ ತಿಳಿದುಕೊಂಡಿರುವಿ
ನನಗೆ ಗೊತ್ತು ಕೇವಲ ಮೊಡವೆ ನೀನು"

ಎಂದು ದಮನಕ್ಕೊಳಪಟ್ಟವರ ಕವಿಯಿತ್ರಿ ರಾ ಮಸೆಕೆಲಾ ವಸಾಹತುಶಾಹಿಯನ್ನು ಮಾಡುತ್ತಾ.

ನಾ ಪರಿಪೂರ್ಣನಾಗಬಲ್ಲೆ
ನೀ ನಾಶಗೊಳಿಸಲಾರೆ" ಮುಂತಾಗಿ ಬರೆ ವಲ್ಲಿ ಮಾನವನ ಆಶಯಗಳ ಬಗ್ಗೆ ಸ್ಪಷ್ಟ ವು ತಾಳುತ್ತಾಳೆ, ಮತ್ತು ಹೋರಾಟದಲ್ಲಿ ನ್ನು ಗುರುತಿಸಿಕೊಳ್ಳುತ್ತಾಳೆ.

ಲ್ಯಾಮಕಾಯ್ "ಎಲ್ಲಾ ಕಪ್ಪು ಜನರಿಗೆ' ಕವನವಲ್ಲಿ :

"ಸತ್ಯದ ವಿರುದ್ಧ ನ್ಯಾಯದ ವಿರುದ್ಧ
ಭೀಕರ ದ್ವೇಷಕ್ಕೆ ಆಶ್ರಯ ವಿತ್ತ ಜನ
ಸತ್ಯ ಮಾತನಾಡಿದ ನಾಲಿಗೆಗಳನ್ನೆಲ್ಲ
ಮಾತಾಡದಂತೆ ಮಾಡಿದ್ದಾರೆ
ಆದರೆ ಸತ್ಯ ಕೇಳಲ್ಪಡುವುದು
ನಾವದರ ನಾಲಿಗೆ ಯಾಗುವೆವು.

ಕ್ಷಿಣ ಆಫ್ರಿಕೆಯಲ್ಲಿ ಅನೇಕ ಜನ ಕಲಾವಿ ಮತ್ತು ಬುದ್ಧಿ ಜೀವಿಗಳು ನಿಸ್ವಾರ್ಥವಾಗಿ ಯ ವಿಮೋಚನೆ ಚಳುವಳಿಯಲ್ಲಿ ಧುಮುಕಿ ಮತ್ತು ದಮನಕ್ಕೊಳಗಾಗಿದ್ದಾರೆ. ಇದು ನಿಸದಾಗಿದ್ದರೂ ಇದಕ್ಕಾಗಿ ಪಶ್ಚಾತ್ತಾಪ ಕಾಗಿಲ್ಲ. ಇದು ಹೋರಾಟದ ಒಂದು ಭಾಗ ಪಿ. ಜ್ಯಾರಿ ಫೀಯಿನ್‌ಬರ್ಗ್ ಹೇಳುವಂತೆ ಸಮುದಾಯ ಒಳ್ಳೆಯದಕ್ಕಾಗಿ ಕಾಣುವ ಗಳನ್ನು, ಕ್ರಾಂತಿಕಾರಿ ಕವಿ ಗಟ್ಟಿಗೊಳಿಸು , ವಿಮೋಚನಾ ಚಳುವಳಿ ಆ ಕನಸನ್ನು ಗಿಸಲು ಹೋರಾಡುತ್ತದೆ.

ಕೋತಿ ಕತೆ

ಆರನೆ ಕ್ಲಾಸ್ ಓದುತ್ತಿದ್ದೆ. ಶನಿವಾರ, ಭಾನುವಾರ ಬಂದರೆ ದನ, ಕೋತಿ ಕಾಯುವುದು ನನ್ನ ಪಾಲಿನ ಕೆಲಸ. ಹಿಪ್ಪೆ ತೋಪಿನ ಪಕ್ಕದಲ್ಲಿ ಒಂದು ತುಂಡು ಜಮೀನಿದೆ. ಅದರಲ್ಲಿ ರಾಗಿ, ಜೋಳ, ಹುಳ್ಳಿ ಬೆಳೆಯುವುದು ಸಾಮಾನ್ಯ. ಹಿಪ್ಪೆ ತೋಪು ಕೋತಿಗಳ ವಾಸಸ್ಥಾನವಾದ್ದರಿಂದ ಚಿಗುರೊಡೆಯುವಾಗಲೆ ಬೆಳೆಯನ್ನು ಕೋತಿಗಳು ಬಾಯಿಗೆ ಹೆಕ್ಕಿಕೊಳ್ಳುತ್ತಿದ್ದವು. ಅದಕ್ಕಾಗಿ ಮಸೀವ್ನೆ ಎದ್ದು ಚಳಿಗೆ ಗೋಣೀ ಚೀಲದ ಕುಪ್ಪೆ ಇಟ್ಟುಕೊಂಡು, ಕವಣೆ ಹೆಗಲಿಗೆ ಹಾಕಿಕೊಂಡು, ಒಂದು ಚರ್ಮದ ಚೀಲದಲ್ಲಿ ಕಲ್ಲು ತುಂಬಿಕೊಂಡು ಗಕೆ ಬೈಲು ಬಿದ್ದು ಓಡುತ್ತಿದ್ದೆ. ಅಷ್ಟೊತ್ತಿಗಾಗಲೇ ಹೊಲೇರ ಹಟ್ಟಿ ಮೂಲೆ ಮನೆ ಕೆಂಪಯ್ಯನ ಮಗ ಮರದ ಅಟ್ಟದ ಮೇಲೆ ನಿಂತು ಡಬ್ಬ ಬಡಿಯುತ್ತಿದ್ದ.

ಅವನ ಜೊತೆ ಮಾತನಾಡಿ ಹೋಗುವಷ್ಟರಲ್ಲಿ ನಮ್ಮ ಹೊಲಕ್ಕೆ ಕೋತಿಗಳು ಮುತ್ತಿಕೊಂಡಿರುತ್ತಿದ್ದವು. ಆ ಗುಂಪಿನಲ್ಲಿ ಮಿತಿ ಮೀರಿದ ಒಂದು ಗಡವ ಇತ್ತು. ಅದು ಗುರ್ ಎಂದು ಹೆದುರಿಸುತಿತ್ತು. ಆದ್ದರಿಂದ ದೂರದಲ್ಲಿ ನಿಂತು 'ಅಗ್ಯೊ ಅಗ್ಯೊ' ಎಂದು ಕವಣೆಯ ಕಲ್ಲು ಬೀರುತ್ತಿದ್ದೆ. ಕೋತಿಗಳು ಮರ ಹತ್ತಿದ್ದರೆ ನಾಯಿಗಳು ಹಿಂಬಾಲಿಸುತ್ತಿದ್ದೊ. ಸಣ್ಣ ಮರಿಗಳು ಬೇಗ ಹತ್ತಲು ಆಗದೆ ಕಕ್ಕಾಬಿಕ್ಕಿಯಾಗುತ್ತಿದ್ದವು. ಕೋತಿಗಳು ಮೆಲುಕು ಹಾಕುತ್ತ ಮರದ ಮೇಲೆ ಆಡುತ್ತಿದ್ದರೆ ನಾನು ಬುಡದಲ್ಲಿ ನಿಂತು ನೋಡುತ್ತಿದ್ದೆ. ನಾಯಿಗಳು ಬುಸ ಬುಸ ಓಡಾಡುತ್ತಿದ್ದವು. ಹೀಗೆ ಬೆಳೆಯುತ್ತಿದ್ದ ಹೊಲ ಪ್ರತಿದಿನ ಹಾಳಾಗುತ್ತಿರುವುದನ್ನು ತಡೆಯಲು ಕೋತಿ ಹಿಡಿಯುವ ಒಂದು ಉಪಾಯ ಮಾಡಿದೆವು. ಅವತ್ತು ಶನಿವಾರ.

ಒಂದು ಮರದ ಬುಡದಲ್ಲಿ ಒಂದು ಮಣಕೈ ಉದ್ದ ಗುಂಡಿ ತೆಗೆಯುವುದು. ಅದರ ದಡಕ್ಕೆ ಜೀರ ಗುಣಿಕೆ ದಾರ ಬಿಟ್ಟು ಕಾಣದಂತೆ ಮುಚ್ಚುವುದು. ದಾರದ ಇನ್ನೊಂದು ತುದಿ ಹಿಡಿದು ಸುಮಾರು ಹತ್ತು ಹದಿನೈದು ಅಡಿ ದೂರದ ಒಂದು ಮರದ ಪೊಟರೆಯಲ್ಲಿ ಕದ್ದು ಕುಳಿತುಕೊಳ್ಳುವುದು. ಆ ಗುಂಡಿಗೆ ರೊಟ್ಟಿ ಚೂರು, ರಾಗಿ ತೆನೆ, ಒಂದೊಂದು ದಿನ ಬೋಂಡ, ಈ ರೀತಿ ಕೋತಿ ತಿನ್ನುವ ತಿಂಡಿಯನ್ನು ಹಾಕುವುದು. ತಿಂಡಿಗೆ ಆಸೆ ಬಿದ್ದು ಕೋತಿಗಳು ಬಂದು ಕೈ ಇಟ್ಟಾಗ ದಾರ ಎಳೆದರೆ, ಜೀರು ಗುಣಿಕೆಯು ಕುತ್ತಿಗೆ ಅಥವಾ ಕೈಗೆ ಜೀರಿಕೊಂಡು ಕೋತಿ ಸಿಕ್ಕಿ ಬೀಳುತ್ತಿತ್ತು. ಈ ರೀತಿ ಸಿಕ್ಕಿಕೊಂಡ ಕೋತಿ ಮಿಲಿ ಮಿಲಿ ಒದ್ದಾಡುವಾಗ ಮರದ ಮೇಲಿನ ಕೋತಿಗಳು ಚಿಟಾರನೆ ಕಿರುಚುತ್ತಿದ್ದವು.ಒಂದುದಿನ ಒಂದು ಸಣ್ಣ ಮರಿ ಸಿಕ್ಕಿಬಿತ್ತು. ಅದನ್ನು ಹಿಡಿದು ಮರದ ಪೊಟರಿಗೆ ತಂದೆವು. ಇಡೀ ತೋಪೇ ಸೆಲೆ ಒಡೆಯುವಂತೆ ಕೋತಿಗಳು ಕಿರುಚಿದವು. ಈ ರೀತಿ ಹಿಡಿದ ಕೋತಿ ಮರಿಯ ಕೊರಳಿಗೆ ಗೆಜ್ಜೆ ಕಟ್ಟಿದೆವು. ಹಣೆಗೆ ನಾಮ ಬಳಿದು, ಬಾಲಕ್ಕೆ ಹೂವಿನ ಕುಚ್ಚ ಕಟ್ಟಿ ಸೊಂಟಕ್ಕೆ ಚಿಗುರುಸೊಪ್ಪು ಕಟ್ಟಿ ಬಿಟ್ಟು ಬಿಡುತ್ತಿದ್ದೆವು. ಅದು ಮರ ಹತ್ತಲು ಹೋದರೆ ಮರದ ಮೇಲಿದ್ದ ಕೋತಿಗಳು ಬಿಡುತ್ತಿರಲಿಲ್ಲ, ಓಡಿಸುತ್ತಿದ್ದವು. ಸತತ ಪ್ರಯತ್ನ ಮಾಡಿ ಕೋತಿ ಮರಿ ಗುಂಪು ಸೇರುತ್ತಿತ್ತು.

ಸಾಯಂಕಾಲ ಮನೆಗೆ ಹೋದರೆ ರಾತ್ರಿಯೆಲ್ಲಾ ಕೋತಿ ಹಿಡಿದು ಗೆಜ್ಜೆ ಕಟ್ಟಿದ ಸಾಹಸದ ಮಾತೇ ಮಾತು. ಒಂದೊಂದು ಸಾರಿ ಕೋತಿ ಕನಸಿಗೆ ಬಂದಿದ್ದನ್ನು ಅಪ್ಪ ಅವ್ವನಿಗೆ ಹೇಳಿದರೆ 'ಕೋತಿ, ಹನುಮಂತರಾಯ, ಆಂಜನಯ್ಯ ಒಳ್ಳೆಯದು ಅನ್ನುತ್ತಿದ್ದರು.

ಕತ್ತಲೊಡನೆ ಮಾತುಕತೆ

ಮಾರನೆಯ ದಿನ ಬಾನುವಾರ ಮಸೀವ್ನೆ ಎದ್ದು ಮಾಮೂಲಿ ಹೊರಟೆ. ನೆನ್ನೆ ಬಿಟ್ಟ ಕೋತಿ ಮರಿ ಏನಾಯ್ತು ಅನ್ನುವ ಕುತೂಹಲ. ವರದಯ್ಯ ಅವತ್ತು ಇನ್ನೂ ಬಂದಿರಲಿಲ್ಲ. ಇಷ್ಟೊತ್ತಿಗಾಗಲೇ ಕೋತಿ ಮುತ್ತಿಕೊಂಡಿರಬಹುದೆಂದು ಓಡಿದೆ. ಆದರೆ ಒಂದು ಕೋತಿಯೂ ಕಾಣಲಿಲ್ಲ. ಸಮಾಧಾನವಾಗಿ ತೋಪಿನಲ್ಲಿ ತಿರುಗುತ್ತ ಕೋತಿ ಹಿಡಿದ ಜಾಗದ ಕಡೆ ತಿರುಗಿದೆ. ನಾಲ್ಕೈದು ನಾಯಿಗಳು ಕಚ್ಚಾಡುತ್ತಿದ್ದವು. ಹತ್ತಿರಕ್ಕೆ ಹೋಗಿ ನೋಡಿದರೆ ನೆನ್ನೆ ಹಿಡಿದ ಕೋತಿ ಸತ್ತು ಹೋಗಿತ್ತು. ನಾಯಿಗಳು ತಿನ್ನಲು ಹವಣಿಸುತ್ತಿದ್ದೊ. ಒಂದೊಂದು ನಾಯಿ ಒಂದೊಂದು ಕಡೆ ಎಳೆಯುತ್ತಿದ್ದರಿಂದ 'ಜರ್ ಜರ್' ಗೆಜ್ಜೆ ಸದ್ದು ಕೇಳಿತು. ಬಾಲಕ್ಕೆ ಕಟ್ಟಿದ್ದ ಹೂವಿನ ಕುಚ್ಚ, ಸೊಂಟಕ್ಕೆ ಕಟ್ಟಿದ್ದ ಚಿಗುರುಸೊಪ್ಪೆಲ್ಲ ಕಿತ್ತು ಹೋಗಿ ಸುತ್ತಾ ಇಟ್ಟಾಡಿದ್ದವು. ಗುಂಡಿಯಲ್ಲಿದ್ದ ರೊಟ್ಟಿಯ ಚೂರು ಹಂಗೇ ಇತ್ತು. ತೋಪಿನಲ್ಲಿ ಒಂದೂ ಕೋತಿ ಇರಲಿಲ್ಲ. ಇಡೀ ತೋಪು ಬಿಕೋ ಅನ್ನಿಸಿತು. ನಾಯಿ ಓಡಿಸಿ ಗೆಜ್ಜೆ ಬಿಚ್ಚಿಕೊಳ್ಳಲು ನನಗೆ ಭಯ. ನನ್ನ ಜತೆಯವರು ಬರಲೆಂದು ಎದುರು ನೋಡುತ್ತಿದ್ದೆ.

—ಕೇ ಬಿ.

ಮತಾಂತರ

ಆ. ೧೫ : ಕಾನ್‌ಪುರ ಮತಾಂತರ ನಿಂತದ್ದು ಹೇಗೆ

ಕಾನ್‌ಪುರದಲ್ಲಿ ಆಗಸ್ಟ್ 15ರಂದು ಮತಾಂತರಗಳಾಗಲಿಲ್ಲ ಎಂದು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅಂದು 25,000 ದಲಿತರು ಮತಾಂತರ ಹೊಂದುತ್ತಾರೆಂನು ಪ್ರಕಟವಾಗಿದ್ದುದು ಕೊನೆಯಲ್ಲಿ ಒಬ್ಬರೇ ಮತಾಂತರ ಹೊಂದಿದರು ಎಂಬುದು ನಿಜ. ಆದರೆ ಅಲ್ಲಿ ನಡೆದುದು ಏನು?

ಆಗಸ್ಟ್ 9ರಂದು ನಾನಾರಾವ್ ಪಾರ್ಕಿನಲ್ಲಿ (ಕಂಪನಿಗಾರ್ಡನ್ ಎಂತಲೂ ಹೆಸರು) ಡಾ|| ಅಂಬೇಡ್ಕರ್ ಪ್ರತಿಮೆ ಬಳಿ ದಲಿತ್ ಪ್ಯಾಂಥರರು ಏರ್ಪಡಿಸಬೇಕೆಂದಿದ್ದ ಒಂದು ಸಾರ್ವಜನಿಕ ಸಭೆಗೆ ಹಾಗೂ ಊರಲ್ಲಿ ಪಂಜಿನ ಮೆರವಣಿಗೆಯನ್ನು ನಡೆಸಲು ಅಧಿಕಾರಿಗಳು ಅನುಮತಿ ನೀಡದೆ ನಿರಾಕರಿಸಿದ್ದರು. ಆದರೆ ಅದೇ ದಿನ ಅಲ್ಲಿನ ಜನತಾ ಪಕ್ಷದವರು ಕರೆದಿದ್ದ ಸಾರ್ವಜನಿಕ ಸಭೆಗೆ ಹಾಗೂ ಪೆರೇಡ್ ಮೈದಾನದಲ್ಲಿ ಅಲ್ಲಿನ ಬೇರೋಜ್‌ಗಾರ್ ಸಂಘದವರು ಕರೆದಿದ್ದ ಸಭೆಗಳಿಗೆ ಅನುಮತಿಯನ್ನು ಪೋಲೀಸರು ನಿರಾಕರಿಸಿರಲಿಲ್ಲ. ಕಡೆಗೆ ಪ್ಯಾಂಥರ್ ಮುಂದಾಳುಗಳು ಮತ್ತು ಪೋಲೀಸ್ ಅಧಿಕಾರಿಗಳ ಮಧ್ಯೆ ನಡದ ಮಾತುಕತೆಗಳ ಪ್ರಕಾರ ಪ್ಯಾಂಥರರು ಪಂಜಿನ ಮೆರವಣಿಗೆಯನ್ನು ಮಾಡುವುದಿಲ್ಲವಾದರೆ ಸಭೆಗೆ ಅನುಮತಿ ನೀಡಲಾಗುವುದು ಎಂಬುದಾಗಿ ಪಂಜಿನ ಮೆರವಣಿಗೆಯನ್ನು ಕೈ ಬಿಡಲಾಗಿತ್ತು. ಅಂದು ಮಧ್ಯಾಹ್ನ 3 ಘಂಟೆಗೆ ಸಭೆ ಏರ್ಪಾಟಾಗಿತ್ತು. ಪೋಲೀಸರಿಗೆ ಮಾಹಿತಿ ಕೊಡಲಾಗಿತ್ತಾದರೂ ಅಧಿಕಾರಿಗಳು ಇದ್ದಕ್ಕಿದ್ದಂತೆ ಮಧಾಹ್ನ 1–30 ಘಂಟೆಗೆ ಅನುಮತಿ ಕೊಡುವುದಿಲ್ಲವೆಂದು ತಿಳಿಸಿದುದಲ್ಲದೆ ಯಾವುದೇ ಮುನ್ನೆಚ್ಚರಿಕೆಯನ್ನೂ ನೀಡದೆ ಏರ್ಪಾಟಾಗಿದ್ದ ಫಲಕ, ಬಾವುಟ ಮತ್ತು ಧ್ವನಿವರ್ಧಕಗಳನ್ನು ವಶಪಡಿಸಿಕೊಂಡರು. ಅಲ್ಲದೆ ನೆರೆದಿದ್ದ ಸುಮಾರು 5000 ದಲಿತರ ಗುಂಪನ್ನು ಚದುರಿಸಲು ಲಾಠಿ ಪ್ರಹಾರ ನಡೆಸಿ ಕೈಗೆ ಸಿಕ್ಕವರನ್ನೆಲ್ಲ ಬಂಧಿಸಿದರು. ರೈಫಲ್ ಬಟ್ಟನಿಂದ 12 ವರ್ಷದ ಬಾಲಕನೋರ್ವನ ಬೆನ್ನು ಹುರಿ ಪುಡಿಯಾಯಿತು. ಬಂಧಿತರನ್ನು ಲಾರಿಗಳಲ್ಲಿ ತುಂಬಿಕೊಂಡು ದೂರದ ಉನ್ನಾವ್, ಘಟಮ್‌ಪೂರ್ ಮತ್ತು ಜಜಮಾವ್‌ಗಳ ಬಳಿ ಒಯ್ದು ಬಿಡಲಾಯಿತು. ಅವರ ಬಳಿಯಿದ್ದ ಒಂದು ಪೈಸೆಯನ್ನೂ ಬಿಡದೆ ಹಣ ಮತ್ತು ಕೈಗಡಿಯಾರಗಳನ್ನು ಕೂಡ ಕಿತ್ತುಕೊಂಡರು. ಅವರಲ್ಲಿ ಅನೇಕರು 11–12 ವಯಸ್ಸಿನ ಎಳೆಯರು. ತಮ್ಮ ಮನೆಗೆ ಕಾಲ್ನಡಿಗೆಯಲ್ಲಿ ಹಿಂದಿರುಗಲು ಸುಮಾರು 30 ತಾಸುಗಳು ಬೇಕಾಯಿತು. ಆಗಸ್ಟ್ 14ರ ರಾತ್ರಿ ಪ್ಯಾಂಥರ್ ಪ್ರಮುಖರಾದ ಶ್ರೀ ರಾಮ್ ಮತ್ತು ಅವರ ಗೆಳೆಯರೊಬ್ಬರನ್ನು ದಸ್ತಗಿರಿ ಮಾಡಲಾಯಿತು. ಇಲ್ಲಿಂದ ಒಂದು ವಾ
ವರೆಗೂ 23 ದಲಿತ ಮುಂದಾಳುಗಳನ್ನು ಪೊ
ಸರು ಕಸ್ಟಡಿಯಲ್ಲಿಟ್ಟಿದ್ದರು. ಹೀಗಾಗಿ
ಬೆಳಿಗ್ಗೆ ಒಂದೇ ಒಂದು ಮತಾಂತರ ಘಟನೆ
ಯಲು ಸಾಧ್ಯವಾಯಿತು. ಗಂಗಾಚರಣ್
ದಾಸ್ ಮುಸ್ಲಿಮರಾದರು. ಇದು ನಡೆ
ಕಾಂಗ್ರೆಸ್ (ಐ) ವೇದಿಕೆಯ ಮೇಲೆ ವ
ಕಾಂಗ್ರೆ ಎಂಪಿ ಆರೀಫ್ ಮಹಮದ್‌ಖ
ಅವರ ಸಮ್ಮುಖದಲ್ಲಿ. ದಲಿತ್ ಪ್ಯಾಂಥ

ನೇತೃತ್ವದಲ್ಲಿ ಮತಾಂತರಗಳು ಗುಪ್ತವಾಗಿ
ಯುತ್ತಿವೆ ಎಂಬ ಸುಳ್ಳು ಪ್ರಚಾರಕ್ಕೆ
ಆಸ್ಪದವೇ ಇಲ್ಲ. ಏಕೆಂದರೆ 25000 ಮತಾ
ಗಳ ಬಗ್ಗೆ ದಲಿತ್ ಪ್ಯಾಂಥರರೇ ಖುದ್ದಾಗಿ
ರಂಗ ಪ್ರಚಾರ ಕೊಟ್ಟವರು. ಪ್ಯಾಂಥ
ಹೇಳುವ ಪ್ರಕಾರ ಹಣದ ಆಸೆಗೆ ಮತಾ
ವಾಗುವುದು ಹಾಸ್ಯಾಸ್ಪದ. ಏಕೆಂದರೆ
ದಲಿತನು ಮತಾಂತರದ ನಂತರ ಸರ್ಕಾರಿ ಸೌ
ಗಳಿಂದ ವಂಚಿತನಾಗುತ್ತಾನೆ. ಇದರ ಮ
ಸುಮಾರು 10–12 ಸಾವಿರ ರೂ.ಗಳ
ಆದರೆ ಮತಾಂತರದಿಂದ ಸಿಕ್ಕಬಹುದಾದರೆ
ಹಣ ಈ ಸೌಲಭ್ಯದ ಎದುರು ಯಕಃ
ವಾದುದು. ಆದ್ದರಿಂದ ಈ ಮತಾಂತರ
ಹಣಕ್ಕಾಗಿ ಅಲ್ಲ. ಸಾಮಾಜಿಕ ಶೋಷ
ಅಸಮಾನತೆ ಮತ್ತು ಹಿಂಸಾಚಾರಗಳ ಶತಮ
ಗಳ ಪರಂಪರೆಯಿಂದ ಮುಕ್ತಿಗಾಗಿ. ದಲಿ
ಪ್ಯಾಂಥರ್‌ರ ವಿರೋಧಿಗಳೂ ಕೂಡ ದ
ಮೇಲಿನ ಹಿಂದೂ ದೌರ್ಜನ್ಯ, ಹತ್ಯಾಕಾಂಡ
ಬಗ್ಗೆ ತೀವ್ರವಾಗಿ ಪ್ರತಿಭಟಿಸುವಂಥ ಈ ದಿನ
ಒಂದು ಮಾತಂತೂ ಸ್ಪಷ್ಟ. ಈ ಮಾನವ
ದಹನ ನಿಲ್ಲದೆಹೋದ ಪಕ್ಷದಲ್ಲಿ ಒಂದಿಲ್ಲೊ
ದಿನ ಸಮಗ್ರ ಹರಿಜನ ಸಮುದಾಯವು ಹಿಂ
ಧರ್ಮದಿಂದ ಖಾಲಿಯಾಗುತ್ತದೆ. ಕಾನ್
ದಲ್ಲಿ ಆಗಸ್ಟ್ 15 ಅವಿಶೇಷ ದಿನವಾಗಿರಬಹ
ಆದರೆ ಅದೇ ಈ ಕಥೆಯ ಅಂತ್ಯವಲ್ಲ. ಕಾನ್‌ಪ
ದಲಿತರು ಈಗ ಎಚ್ಚತ್ತಿದ್ದಾರೆ.

ಗುರುರಾಜ ಬೀಡಿಕರ್

(ಆಧಾರ : 'ಸಂಡೇ' ವಾರ ಪತ್ರಿಕೆ.)

ಹಿಂದೂ ಮಾನ ಮುಚ್ಚಿಕೊಳ್ಳಲು ೪ ಅಂಶ ಕಾರ್ಯಕ್ರಮ

1980 ರ ಫೆಬ್ರವರಿ 19ರಂದು ಮೀನಾಕ್ಷಿಪುರಂದ ಹರಿಜನರು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ಸುದ್ದಿಯು ದಹಿಸಿ ಹೋಗುತ್ತಿದ್ದ ಹರಿಜನರ ನಾಡಿನಲ್ಲಿ ಮಿಂಚಾಡಿಸಿ ಆಸೆಯ ಕನಸು ಮೂಡಿಸಿತು.

ಹಿಂದೂ ಧರ್ಮದಲ್ಲಿ ಬೇರುಬಿಟ್ಟಿರುವ ಅಸಮಾನತೆಯನ್ನು ಕಿತ್ತುಹಾಕದೆ ಅರಬ್ ಹಣ, ಕಿಡಿಗೇಡಿಗಳ ಒತ್ತಾಯ ಮುಂತಾಗಿ ಸುಳ್ಳುಕತೆ ಕಟ್ಟಿ, ಹಿಂದೂಧರ್ಮದಲ್ಲಿರುವ ಅಸಮಾನತೆಯನ್ನ ದೂರಿಕರಿಸಲು ತಮಿಳುನಾಡಿನ Hindu Religious andCharitalbeEndowment Dept ಮೋಟಾ ಸ್ವಾತಂತ್ರ್ಯದಿನದಂದು ೪ ಅಂಶಗಳ ಕಾರ್ಯಕ್ರಮ ಹಾಕಿಕೊಂಡು ತಿರುನೆಲ್ವೇಲಿಯ ೪೩, ಪೂರ್ವ ತಂಜಾವೂರ್ ಜಿಲ್ಲೆಯ ೫೮೦, ತಂಜಾವೂರಿನ ೫೦೦ ದೇವಸ್ಥಾನಗಳಲ್ಲಿ ಅಪ್ಪೂರಿ ಕಾರ್ಯಕ್ರಮ ಏರ್ಪಡಿಸಿತ್ತು. **೪ ಅಂಶಗಳು** ೧ ಸಮಾಬಂಧಿ ಭೋಜನ ಅಂದರೆ ಜಾತಿಭೇದವಿಲ್ಲದ ಏಕಪಂಕ್ತೀಯ ಭೋಜನ ಏರ್ಪಡಿಸುವುದು.

೨ ಅಂತರ್ಜಾತೀಯ ವಿವಾಹ ಮಾಡುವುದು.

೩ ಸರ್ಕಾರದ ಆಡಳಿತ ವಿಭಾಗದಲ್ಲಿ ಹರಿಜನರನ್ನು ನೇಮಿಸುವುದು.

೪ ಪುಕ್ಕಟೆ ಯೂನಿಫಾರ್ಮ್ ಬಟ್ಟೆಗಳನ್ನು ಹಂಚುವುದು.

ಸವರ್ಣೀಯರ ಇಂಥ ಕಾರ್ಯಕ್ರಮಗಳನ್ನು ನೋಡಿದರೆ ಇವು ತಪ್ಪೊಪ್ಪಿಗೆಯ ದಂಡಗಳಾಗಬಹುದೇ ಹೊರತು ಮೂಲಭೂತ ಬದಲಾವಣೆಯ ಪೂರಕ ಅಂಶಗಳಾಗುವುದು ಖಂಡಿತ ಸಾಧ್ಯವಿಲ್ಲ. ಇದೆಲ್ಲವನ್ನೂ ದಾಟಿ ಈಗ ತುರ್ತಾಗಿ ಆಗಬೇಕಾಗಿರುವುದು ಜಾತಿ ವ್ಯವಸ್ಥೆಯನ್ನೇ ಬೇರು ಸಮೇತ ನಾಶಮಾಡುವ ಸಾಧ್ಯತೆ ಇದೆಯೊ ಅನ್ನುವುದರ ಬಗ್ಗೆ ಪ್ರಯತ್ನ,

—**ಕ್ಷೀರ ಸಾಗರ**

ತಾಂತರ : ಮೂಲಭೂತ ಬದಲಾವಣೆಯಲ್ಲ

ತರ ಮತಾಂತರ ಅನ್ಯಮಾರ್ಗವಿಲ್ಲದೆ ಸಂಭ
ವ ಘಟನೆ ಹಾಗೂ ಧರ್ಮದ ಕಠೋರ
ೀಲೆಗಳಿಂದ ಪಡೆದಿರುವ ಬಿಡುಗಡೆ. ಹಿಂದೂ
ವನ್ನು ಗುತ್ತಿಗೆಯನ್ನಾಗಿಸಿಕೊಂಡ ಜನ
ಸುತ್ತಿದ್ದಾರೆ. ಖಾಕಿ ಚಡ್ಡಿ ಧರಿಸಿ, ಮಂತ್ರ
ಲಾಠಿ ತಿರುಗಿಸಿ "ಹಿಂದೂ ರಾಷ್ಟ್ರ" ಕಟ್ಟಲು
ರುವ ಮುರ್ಖಜನಕ್ಕೆ ದಂಗು ಬಡಿದಿದೆ.
ಗುರುಗಳು, ಮಠಾಧಿಪತಿಗಳು ಬೆವರೊರೆಸಿ
ೂ ಪುರುಸೊತ್ತಿಲ್ಲದೆ ಬಾಯಿಗೆ ಬಂದದ್ದ
ತಮ್ಮ ಧರ್ಮದ ಗೋರಿಯನ್ನು ತಮ್ಮ
ತೋಡಿಕೊಳ್ಳುತ್ತಿದ್ದಾರೆ.
ರೆ ನೆನಪಿರಲಿ ಮತಾಂತರ ಎಂದೂ ಮೂಲ
ಬದಲಾವಣೆ ತರಲಾರದು. ಕಲ್ಪನೆ,
ಕತೆ, ಅವೈಜ್ಞಾನಿಕತೆಯಿಂದ ಕೂಡಿರುವ
ಿಂದೂ ಮತಧರ್ಮಗಳೂ ಮಾನವ
ಮಾರಕವಾಗಿದ್ದು, ಈ ಎಲ್ಲಾ ಮತ
ಳ ಬಂಧನದಿಂದ ಬಿಡುಗಡೆ ಪಡೆಯಲು
ೂ ಸೇರಿದಂತೆ ಎಲ್ಲಾ ಜನವರ್ಗ ಪ್ರಯ
ಕು. ಜಾತಿ ಪದ್ಧತಿ, ಅಸ್ಪೃಶ್ಯತೆ ಸೇರಿ
ಮೀನ್ದಾರಿ ಬಂಡವಾಳಶಾಹಿ ವ್ಯವಸ್ಥೆಯ
ಶೋಷಣೆಗೆ ಒಳಪಟ್ಟು ಎಲ್ಲಾ ಜಾತಿಯ
, ರೈತಕಾರ್ಮಿಕರೊಂದಿಗೆ ಜೊತೆ ಸೇರಿ
ಹೋರಾಟ ನಡೆಸಬೇಕು. ಆಗ ಮಾತ್ರ
ತೆಯ ಸಮಾಜ ನಿರ್ಮಾಣ ಸಾಧ್ಯ.

—ಕುಮಾರ್ ಕುಂದಾಪುರ, ಮೈಸೂರು

ೊದಲ ಹೆಜ್ಜೆ ಎಚ್ಚರ!

ರ ಮತಾಂತರವನ್ನು ತಡೆಯಲೆತ್ನಿಸುವ
, ಮಠಾದೀಶರು ತಮ್ಮ ನಿಲುವನ್ನು
ಳ್ಳುವುದು ಜರೂರಾಗಿದೆ. ದಲಿತರು ದಲಿತ
ಇರುವಂತೆ ಬೆಳೆದು ಬಂದ ಸಮಾಜದ
ಗಳು ಮತಾಂತರಕ್ಕೆ ಮೂಲಭೂತ
ಸವರ್ಣೀಯರ ನಡವಳಿಕೆಯಲ್ಲಿ ಅಂತ
ರಂಗವೆಂದೂ ಒಂದಾಗುವವರೆಗೆ ದಲಿತ
ೂ ಧರ್ಮದೊಳಗೆ ಮುಕ್ತಿ ಇಲ್ಲ. ದಲಿತ
ಟನೆಗೆ ಮತಾಂತರ ಒಂದು ಹೆಜ್ಜೆ ಮಾತ್ರ
ಹೆಜ್ಜೆ ತುಳಿಯುವ ಮುನ್ನ ಸವರ್ಣೀ
ಮ್ಮ ಸ್ವಂತ ಹಿತದೃಷ್ಟಿಯಿಂದಲೇ ಎಚ್ಚೆ
ಳ್ಳುವುದು ಕ್ಷೇಮ.

ಾವಿನಕುಳಿ ಶ್ರೀನಿವಾಸ ಮೈಸೂರು

'ನಾನು ಹಿಂದೂ' ಎಂಬ ಅವಮಾನ

ಯಾವ ದಲಿತನೂ "ನಾನು ಹಿಂದೂ" ಎಂದು ಹೇಳಿಕೊಳ್ಳ ಕೂಡದು ಎಂದು ನನ್ನ ಅಭಿಪ್ರಾಯ. ಶತಮಾನಗಳಿಂದ ಕ್ರೌರ್ಯಕ್ಕೆ, ಅಪಮಾನಕ್ಕೆ, ಹಂಗಿಗೆ ಒಳಗಾಗಿರುವ ದಲಿತರು ಹಿಂದೂ ಧರ್ಮದಲ್ಲಿ ಇನ್ನೂ ಮುಂದುವರಿಯುತ್ತಾ ಬಂದಿರುವುದು ಒಂದು ದೊಡ್ಡ ಪವಾಡವೇ ಸರಿ. ಆದರೆ ಹಿಂದೂ ಧರ್ಮ ಬೇಡ ಎಂದು ಹೇಳುವುದು ಎಷ್ಟು ಸಹಜವೊ ಇನ್ನೊಂದು ಧರ್ಮಬೇಕು ಎಂದು ಬಯಸುವುದು ಅಸಹಜ ವಲ್ಲವೆ? ಅವೈಜ್ಞಾನಿಕವಲ್ಲವೆ? ಎಲ್ಲ ಧರ್ಮಗಳೂ ಮನುಷ್ಯನ ಅಜ್ಞಾನವನ್ನು, ಸಾವಿನ ಭಯವನ್ನು ಮುಂದಿನ ದಿನಗಳ ಅನಿಶ್ಚತತೆಯನ್ನು ಬಂಡವಾಳವನ್ನಾಗಿಟ್ಟುಕೊಂಡೇ ಹುಟ್ಟಿ ಬಂದಂತಹವು. ಹೀಗಿರುವಾಗ ಹಿಂದೂ ಧರ್ಮ ಬಿಟ್ಟು ಇನ್ನೊಂದು ಧರ್ಮಕ್ಕೆ ಪರಿವರ್ತಿತವಾಗುವುದು ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದಂತಾಗುವುದಿಲ್ಲವೆ? ಒಂದು ಭ್ರಮೆಯನ್ನು ತ್ಯಜಿಸಿ ಇನ್ನೊಂದು ಭ್ರಮೆಯತ್ತ ದಲಿತರು ಸಾಗಬೇಕೆ? ಅದರಲ್ಲೂ ಇಸ್ಲಾಂ ಧರ್ಮಕ್ಕೆಪರಿವರ್ತಿತ ವಾಗುವುದರಲ್ಲಿ ದಲಿತರಿಗೆ ಹೆಚ್ಚಿನ ಅಪಾಯ ಕಾದಿದೆ ಎಂದು ನನ್ನ ಅಭಿಮತ. ಇಸ್ಲಾಂ ಧರ್ಮ ಮನುಷ್ಯನ ಬುದ್ಧಿ ಮನಸ್ಸುಗಳ ಸ್ವಾತಂತ್ರ್ಯವನ್ನು ಪೂರ್ತ ತನ್ನಹತೋಟಿಯಲ್ಲಿಟ್ಟುಕೊಳ್ಳಬಯಸುತ್ತದೆ. ಇಚ್ಛಾಸ್ವಾತಂತ್ರ್ಯವನ್ನು ಅದು ದಮನಮಾಡುತ್ತದೆ. ಒಬ್ಬ ಹಿಂದೂ, ಕ್ರೈಸ್ತ, ಬೌದ್ಧ ಬಂಡೇಳುವ ಸಾಧ್ಯತೆ ಇದೆ, ಅವಕಾಶವೂ ಇದೆ. ಆದರೆ ಇಸ್ಲಾಂ ತನ್ನ ಅನುಯಾಯಿಗಳಿಗೆ ಈ ಸ್ವಾತಂತ್ರ್ಯ ಕೊಟ್ಟಿಲ್ಲ. ಇಸ್ಲಾಂನ ಇತಿಹಾಸವೇ ಇದಕ್ಕೆ ಸಾಕ್ಷಿ. ವೈಚಾರಿಕ, ಬೌದ್ಧಿಕ ಕ್ಷೇತ್ರದಲ್ಲಿ ಇಸ್ಲಾಂನ ಕೊಡುಗೆ ಅತ್ಯಲ್ಪ. ದಲಿತರು ಮುಸಲ್ಮಾನರಾಗಿ ಸಾಮಾಜಿಕ ಭದ್ರತೆ. ಗೌರವಗಳನ್ನುಗಳಿಸಿಕೊಳ್ಳಬಹುದು, ಆದರೆ ಅದಕ್ಕಾಗಿ ಅವರು ತಮ್ಮ ಬೌದ್ಧಿಕ ಮಾನಸಿಕ ಸ್ವಾತಂತ್ರ್ಯಗಳನ್ನು ಬಲಿಕೊಡಬೇಕಾಗುತ್ತದೆ.

—ಎಂ. ಆರ್. ವಿಶ್ವನಾಥರೆಡ್ಡಿ ಕೊಟ್ಟೂರು,

ಮತಾಂತರ ಶ್ರೀ ಎ.ಡಿ. ಕೃಷ್ಣಯ್ಯನವರ ಪ್ರಶ್ನೆಗಳು

ಒಂದು: ಮತಾಂತರದಿಂದ ಸವರ್ಣೀಯ ಹಿಂದೂಗಳಿಂದುಂಟಾಗುವ ದೌರ್ಜನ್ಯಗಳು ಕಡಿಮೆಯಾಗುತ್ತವೆಂಬ ಸಾಧ್ಯತೆ ಇದೆಯೆ? ಎರಡು: ಹೊಸಮತವನ್ನವಲಂಬಿಸುವವರಿಗೆ ಆ ಮತದವರಿಂದ ಎಲ್ಲಾ ವಿಧವಾದ ಸಮಾನತೆಗಳು ದೊರೆಯಬಲ್ಲವೆ? ಮೂರು: ಈ ಮತಾವಲಂಬನೆಗಿಂತ ಹಿಂದೆ ನಡೆಸುತ್ತಿರುವ ಜೀವನೋಪಾಯಗಳಿಗೆ ಉದ್ಯೋಗಗಳಿಗೆ) ಧಕ್ಕೆ ಬಂದು ನಿರ್ಗತಿಕರಾಗದಂತೆ ರಕ್ಷಣೆ ದೊರೆಯುತ್ತದೆಯೆ? ನಾಲ್ಕು: ತನ್ನ ನೆರೆಹೊರೆಯವರ ಸಂಬಂಧಗಳು ಉತ್ತಮ ರೀತಿಯಲ್ಲಿ ಮಾರ್ಪಾಡಾಗುತ್ತವೆಯೆ? ಐದು: ಹೊಸಮತವನ್ನು ಸೇರಿದನಂತರ ಹಿಂದಿನ ಮತದ ಆಚಾರವಿಚಾರ ವ್ಯವಹಾರಗಳ ಪೂರ್ಣ ಮರೆವು ಸಾಧ್ಯವೆ? ಆರು: ಹೊಸಮತಗಳ ನಿಯಮಗಳ ಅನುಷ್ಠಾನ ಸುಲಭ ಸಾಧ್ಯವೆ? ಇವೆಲ್ಲಕ್ಕೂ ಮಿಗಿಲಾಗಿ ಯಾವ ಮೂಲ ಉದ್ದೇಶಕ್ಕಾಗಿ ಮತಾವಲಂಬನೆ ಮಾಡಿದರೋ ಆ ಉದ್ದೇಶಗಳು ಈಡೇರುತ್ತವೆಯೆಂಬ ಮೂಲಭೂತ ಪ್ರಶ್ನೆಗಳಿಗೆ ಸೂಕ್ತ ನಿವಾರಣೋಪಾಯಗಳು ದೊರೆಯುವಲ್ಲಿ ಮತಾಂತರವನ್ನು ಕೈಗೊಳ್ಳಬಹುದು.

ಯಾವುದೇ ಮತವಾದರೂ ಹೊಸಬರಿಗೆ (ಮತಾಂತರಿಗಳಿಗೆ) ಕೂಡಲೇ ಸರ್ವಸಮಾನತೆಯನ್ನು ಕೊಡಬಲ್ಲುದೇ ಎಂಬುದು ಸಂಶಯಾತ್ಮಕ. ಅಂತಹ ಸಮಾನತೆಗಳು ದೊರೆಯುವಲ್ಲಿ ಯಾವ ಸಂಶಯವೂ ಇಲ್ಲವೆಂಬುದನ್ನು ದೃಢೀಕರಿಸಿಕೊಂಡು ಯಾವ ಧರ್ಮವನ್ನಾದರೂ ಅವಲಂಬಿಸಿದರೂ ದೋಷ ತೋರದು. ಒಟ್ಟಾರೆ ಈ ದಿಕ್ಕಿನ ದಲಿತರು ಮತಾಂತರದಿಂದ ಏನನ್ನು ಸಾಧಿಸದಿದ್ದರೂ, ಹಿಂದೂ ಸಮಾಜದಲ್ಲಿನ ಅನೇಕ ದುರ್ಬಲವರ್ಗದವರೆಲ್ಲರೂ ಒಂದಾಗುವ ಒಂದು ಸಾಧನೆಯು ಮಾತ್ರ ಫಲಕಾರಿಯಾಗಬಲ್ಲದು.

ಗಣಿ ದಲಿತರ ಕೊಲೆ : ದ.ಸಂ.ಸಮಿತಿ ಪ್ರತಿಭಟನೆ

(ರವೀಂದ್ರಗಡ್ಕರ್, ಶಾಂತಪ್ಪಹಾದಿಮನಿ)

ಕಲ್ಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನ ಕುರು ಕುಂಟಾ ಎಂಬಲ್ಲಿ ಹಣ ಚೆಟ್ಟಿಯವರ ಸಿಮೆಂಟ್ ಕಲ್ಲಿನ ಗಣಿಯಲ್ಲಿ ಕೆಲಸಗಾರರಾಗಿದ್ದ ದಲಿತರಾದ ಶಾಂತಪ್ಪ ಮತ್ತು ಭೀಮಶಾ ಎಂಬುವರ ಮೇಲೆ, ಪಕ್ಕದ ಗಣಿ ಮಾಲೀಕರಾದ ಸವರ್ಣೀಯ ಶಿವ ಶರಣಪ್ಪತಡಕಲ್‌ಎಂಬುವರು ತನ್ನ ಸಂಬಂಧಿ ಗಳೊಂದಿಗೆ ೨೧-೮ ೮೧ರಂದು ಹಾಡು ಹಗಲೇ ಹಲ್ಲೆ ನಡೆಸಿದ್ದು-ತೀವ್ರವಾಗಿ ಗಾಯಗೊಂಡ ಶಾಂತಪ್ಪ ಮೃತರಾಗಿದ್ದಾರೆ, ಭೀಮಶಾ ಸ್ಥಿತಿ ಚಿಂತಾಜನಕವಾಗಿದೆ.

ಹಲ್ಲೆ ನಡೆದ ಹಿಂದಿನ ದಿನ ೨೦-೮-೮೧ರಂದು ರಜಪೂತ ಹಣಚಟ್ಟಿಯವರ ಗಣಿ ಕೆಲಸಗಾರರು ಪಕ್ಕದ ಶಿವಶರಣಪ್ಪತಡಕಲ್ ಅವರ ಗಣಿ ಕೆಲಸ ಗಾರರ ಸಂಗಡ ಜಗಳ ನೆಡೆಸಿದ್ದರು. ಪರಸ್ಪರರ ಗಣಿಗಳಲ್ಲಿ ಓಡಾಡಲು ದಾರಿ ಬೇಕು ಎಂಬುದೇ ಪರಸ್ಪರರ ಬೇಡಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಅಂದು ಸಂಜೆ ಶಿವಶರಣಪ್ಪ ಮತ್ತು ಅವನ ಕೆಲಸ ಗಾರರು ಹಣಚೆಟ್ಟಿ ಗಣಿಯ ಮೇಸ್ತ್ರಿಗೆ ಚೆನ್ನಾಗಿ ದಳಿಸಿದರು. ತಮ್ಮ ಮೇಸ್ತ್ರಿಗೆ ಹೊಡೆತ ಬಿದ್ದು ದನ್ನು ತಿಳಿದ ಹಣಚೆಟ್ಟಿ ಗಣಿಕೆಲಸಗಾರರು ದಲಿತ ಕಾರ್ಮಿಕರಾದ ಶಾಂತಪ್ಪ ಹಾಗೂ ಭೀಮಶಾ ನೇತೃತ್ವದಲ್ಲಿ ಶಿವಸರಣಪ್ಪತಡಕಲ್‌ರನ್ನು ವಿಚಾರಿಸಲು ಹೋಗಿ ಸಿಗದೆ ವಾಪಸ್ ಬಂದರು.

ಗಣಿಯ ಮಾಲೀಕರೇ ಸುಮ್ಮನಿರುವಾಗ ಅಲ್ಲಿಯ ಕೆಲಸಗಾರರ ಮುಂದಾಳತ್ವವಹಿಸಿ ಈ ಬಗ್ಗೆ ತಮ್ಮನ್ನು ವಿಚಾರಿಸಲು ಬರೆದದನ್ನು ಸಹಿಸಿದ ಶಿವಶರಣಪ್ಪತಡಕಲ್ ದಲಿತರಾದ ಶಾಂತಪ್ಪ ಮತ್ತು ಭೀಮಶಾರನ್ನು ಹೊಡೆಯಲು ಸಮಯ ಕಾಯುತ್ತಿದ್ದರು.

ಮಾರನೆ ದಿನ ೨೧-೮-೮೧ರಂದು ಶಾಂತಪ್ಪ ಮತ್ತು ಭೀಮಶಾ ಕೆಲಸ ಮುಗಿಸಿ ಮಧ್ಯಾಹ್ನ ೩.೩೦ ಗಂಟೆಗೆ ಚಹಾ ಕುಡಿಯಲು ಊರ ಒಳಗೆ ಹೋದಾಗ ಸಮಯ ಕಾಯುತ್ತಿದ್ದ ಶಿವಶರಣಪ್ಪ ತಡಕಲಿ ತನ್ನ ಸಂಬಂಧಿಗಳೊಂದಿಗೆ ಕಲ್ಲುಗಳೊಂದಿಗೆ ದಾಳಿ ನಡೆಸಿದನು. ಯಾವಾಗಲೂ ಹತ್ತಿರ ಚಾಕು ಇಟ್ಟುಕೊಂಡೇ ದಾದಾಗಿರಿ ಮಾಡುವ ರಾಜು (ಸಿಂಪಿಗ ಜಾತಿಯ ಗಣಪತರಾವ್ ಎಂಬ ಗಣಿಯ ಮಾಲೀಕನ ಮಗ)ಚಾಕುವನ್ನು ತೆಗೆದು ಶಿವಶರಣಪ್ಪನ ಮಗ ಶಿವಣ್ಣನಿಗೆ ನೀಡಿದ್ದು, ಶಿವಣ್ಣ ಭೀಮಶಾನ ಬೆನ್ನಿಗೆ ಚಾಕು ಹಾಕಿರುವನು. ದವಾಖಾನೆಗೆ ಸೇರಿಸುವುದಕ್ಕೆ ಹೋಗುತ್ತಿರುವ ದಾರಿಯಲ್ಲೇ ಶಾಂತಪ್ಪ ಮೃತನಾಗಿದ್ದು, ಸೇಡಂ ಸರ್ಕಾರಿ ದವಾಖಾನೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಭೀಮಶಾ ಸ್ಥಿತಿ ಚಿಂತಾಜನಕವಾಗಿದೆ.

ಮೃತನಾಗಿರುವ ಶ್ರೀ ಶಾಂತಪ್ಪ ಐವರು ಮಕ್ಕಳನ್ನು ಅಗಲಿದ್ದಾನೆ. ಭೀಮಶಾ ಪಕ್ಕದಲ್ಲಿ

ದವಾಖಾನೆಯಲ್ಲಿ ಕುಳಿತಿದ್ದ ಚಿಕ್ಕ ವಯ
ಹೆಂಡತಿಯನ್ನು ನೋಡಿದರೆ ಯಾರಿಗಾ
ಕಣ್ಣೀರು ಬರುತ್ತದೆ. ಪೋಲೀಸರು ಇದು
ಶಿವಶಾರಣಪ್ಪ ತಡಕಲ್, ಶಿವಣ್ಣ ತಡ
ನಾಗಣ್ಣ ತಡಕಲ್ ರಾಜು ತಂದೆ ಗಣ
ಸಿಂಪಿಗ, ಭೀಮಣ್ಣ ವಡ್ಡರ ಶಾಮಣ್ಣ ವ
ಪಾಟೀಲರನ್ನು ಬಂಧಿಸಿದ್ದಾರೆ. ಪ್ರಕರ
ಸಂಬಂಧ ಪಟ್ಟ ಇನ್ನೂ ಐವರನ್ನು ಬಂಧಿಸಿಲ್ಲ
ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಸೆ
ತಾಲೂಕು ಕೇಂದ್ರದಲ್ಲಿ ಕೊಲೆಗಾರರಿಗೆ ಅ
ವಾದ ಶಿಕ್ಷೆಯನ್ನು ನೀಡಬೇಕೆಂದೂ, ತಲೆ ತ
ಕೊಂಡವರನ್ನು ಕೂಡಲೇ ಬಂಧಿಸಬೇಕೆಂಬ ಬ
ಕೆಯನ್ನು ಮುಂದಿಟ್ಟುಕೊಂಡು ಪ್ರತಿಭಟ
ಮೆರವಣಿಗೆಯನ್ನು ಮಾಡಲು ಯೋಜನೆ ಹ
ಕೊಂಡಿದೆ. ತಾಲೂಕಾದಲ್ಲರುವ ದಲಿತರ
ಎಚ್ಚರಗೊಳಿಸಿ, ಒಂದುಗೂಡಿಸಿ ಹೋರಾ
ಯೋಜನೆಯನ್ನು ದ.ಸಂ.ಸ ಕಲ್ಬುರ್ಗಿ ಜಿ
ಶಾಖೆಯು ಹಮ್ಮಿಕೊಳ್ಳುತ್ತಿದೆ.

ಕೊಲೆಗಡುಕರ ವಿರುದ್ಧ ದಲಿತರ ಕಾಲುನಡಿಗೆಯ ಜಾಥ

(ಶಾಂತಲಕ್ಷ್ಮಿ ಮಂಡೆನೂರು)

ತಿಪಟೂರು : ೧೯-೯-೮೧, ಗಿಣಕಿಕೆರೆ ಗ್ರಾಮದ ದಲಿತ ಕಲ್ಲೇಶಯ್ಯನ ಪ್ರಾಣ ತೆಗೆದು, ಆತನ ಹೆಂಡತಿ ಮಕ್ಕಳನ್ನು ಬೀದಿಪಾಲು ಮಾಡಿರುವ ಕೊಲೆಗಡುಕರಾದ (ಕ್ರೂರಿ) ಚಂದ್ರಯ್ಯ ಮತ್ತು ಕಲ್ಲಶೆಟ್ಟಿಹಳ್ಳಿಯ ಛೇರ್ಮನ್ ಶಂಕರಪ್ಪ, ಇವರುಗಳನ್ನು ಗಲ್ಲಿಗೇರಿಸುವಂತೆ ಒತ್ತಾಯಿಸಿ ತಿಪಟೂರು ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು, ಮತ್ತು ಸುತ್ತಮುತ್ತಲ ಹಳ್ಳಿಯ ನೂರಾರು ದಲಿತರು, ಮತ್ತು ವಿದ್ಯಾರ್ಥಿಗಳು ಗಿಣಕಿಕೆರೆ ಗ್ರಾಮದಿಂದ ಕೊಲೆಗಡುಕ ಚಂದ್ರಯ್ಯನ ಊರಾದ ಉಪ್ಪಾರ ಹಳ್ಳಿಗೆ ಕಾಲು ನಡಿಗೆಯಲ್ಲಿ ಹೋಗಿ ಛೀಮಾರಿಹಾಕಿದರು. ದೂರದ ಹಳ್ಳಿಯಿಂದ, ಜಾತಕ್ಕೆ ಬಂದು ಸೇರಿದ ದಲಿತರು ಉರಿಯುವ ಪೆಂಜಿನ ನಡುವೆ, "ಚಂದ್ರ ಕೇಡಿ,ಹಾಕಿ ಅವನಿಗೆ ಬೇಡಿ" ಮುಂತಾದ ಘೋಷಣೆಗಳನ್ನು ಕೂಗುತ್ತ ಪ್ರತಿಭಟಿಸಿದರು.

ಬಹಿರಂಗ ಸಭೆಯಲ್ಲಿ ಚಂದ್ರಪ್ರಸಾದ್ ತ್ಯಾಗಿ ನಾಗರಾಜ್, ರಾಮಯ್ಯ, ದೊಡ್ಡೇಗೌಡ, ಅವರು ಕಲ್ಲೇಶಯ್ಯನ ಕೊಲೆಗೆ ಹಿನ್ನೆಲೆಯಾಗಿ ನಿಂತಿರುವ ಸ್ಥಳೀಯ ಭೂ ಮಾಲೀಕರು, ಮತ್ತು ಕೊಲೆಯನ್ನು ಮನ್ನಾ ಮಾಡಲು ಸುಳ್ಳುಸಾಕ್ಷಿ ಹುಟ್ಟಿಸಿರುವ ಪೋಲೀಸರ ಡಗಲುಬಾಜಿತನವನ್ನು ಖಂಡಿಸುತ್ತಾ ಕಲ್ಲೇಶಯ್ಯನ ಕೊಲೆ ಬಗ್ಗೆ ನ್ಯಾಯಾಂಗ ತನಿಕೆ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಿದರು :

ನೆಲೆಗಾಗಿ ದಲಿತರ ಸತ್ಯಾಗ್ರ

(ಎಂ.ಜಯಣ್ಣ)

ಈ ದೇಶದ ಕೋಟ್ಯಾಂತರ ಬಡ ಜನತೆ
ಲೂ ನೆಲೆಯಿಲ್ಲದೆ ಬದುಕುತ್ತಿರುವಾಗ :

ಇದನ್ನು ಮನಗಂಡು ದ.ಸಂ.ಸ. ಚಿತ್ರದು
ಶಾಖೆಯ ನೇತೃತ್ವದಲ್ಲಿ ೨೧-೫-೮೧ ಮ
೨೫-೫-೮೧ ರಂದು ನಗರದಲ್ಲಿ ಮೂರು ಸಾ
ಗುಡಿಸಲು ನಿವಾಸಿಗಳು ಭಾರಿ ಪ್ರತಿಭಟ
ಮಾಡಿದರು. ಬೇರೆಯವರ ಜಾಗದಲ್ಲಿ ವಾಸಿ
ತ್ತಿರುವ ತಮಗೆ ಖಾಯಂ ಜಾಗ ಒದಗಿಸ
ಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸ
ದಾಗ, ಅವರು ಶೀಘ್ರವಾಗಿ ಹಂಗಾಮಿ
ಹಾರ ಕಲ್ಪಿಸುವು ದಾಗಿ ವಾಗ್ದಾನ ಮಾಡಿದ
ಆದರೆ ಆ ವಾಗ್ದಾನ ಇದುವರೆಗೂ ವಾಗ್ದಾ
ವಾಗೇ ಉಳಿದಿರುವುದು ಶೋಚನೀಯವಾಗಿ

ಗೋಸಾಯಿಗಳು ದೇಶದಲ್ಲಿ ಅಲೆಮಾರಿಗ
ರುವಾಗ ಚಿತ್ರದುರ್ಗದಲ್ಲಿ ೨೫-೩೦ ವರ್ಷಗ
ದಲೂ ಒಂದೆಡೆ ನೆಲೆಯಾಗಿ ನಿಂತಿದ್ದು ಅವರನ
ಪುನಃ ಅಲೆಮಾರಿಗಳಾಗಿ ಮಾಡದೇ ಒಂದೆಡೆ ನ
ಗೊಳ್ಳಲು ಸರ್ಕಾರ ತೀರ್ಮಾನ ಕೈಗೊಳ್ಳ
ಕೆಂದು ದ.ಸಂ.ಸ. ಜಿಲ್ಲಾ ಶಾಖೆ ಜಿಲ್ಲಾಧಿಕಾ
ಗಳ ಕಚೇರಿ ಮುಂದೆ ಅನಿರ್ದಿಷ್ಟ ಕಾಲ ಸ
ಉಪವಾಸ ಸತ್ಯಾಗ್ರಹ ನಡೆಸುತ್ತಿದೆ.

ನ್ಯಾಯ, ಕೊಲೆ, ಸುಲಿಗೆ, ದಬ್ಬಾಳಿಕೆಗಳ ವಿರುದ್ಧ ಸಂಘಟನೆಯೊಂದ ನೇತೃತ್ವದಲ್ಲಿ ನಡೆವ ಯಾವುದೇ ರೀತಿಯ ಕಾರ್ಯಕ್ರಮ ವರದಿಯನ್ನು ಸಂಕ್ಷಿಪ್ತವಾಗಿ ಬರೆದು ಕಳಿಸಿರಿ.

ಕಂಡದ್ದು ಕಂಡಂಗೆ

ಭೂಮಿ ಕದಿಯುವ ಹಿಕಮತ್‌ಗಾರ ಶಾಸಕ : ವಿಶ್ವನಾಥ

. ಆರ್. ನಗರ: ತಾಲ್ಲೂಕಿನ ಹೆಸರಾದ ಕ ವಶ್ವನಾಥ ಮತ್ತು ಬ್ಯಾಡರಹಳ್ಳಿ ಪಂಚಾ ಛೇರ್ಮನ್ ಪ್ರಭುದೇವರಾಜೇ ಅರಸ್ ುವರು 'ಹಿಕ್‌ಮತ್' ಮಾಡುವುದರಲ್ಲಿ ು ವಾಸಿಯಾದವರು. ಇವರ ಉರಿಗಣ್ಣು ಯಾರನ್ನೂ ಸುಡದೆ, ಸುಮ್ಮನೆ ಬಿಟ್ಟಿರುವು ಈಗ ಇವರ ಉರಿಗಣ್ಣಿಗೆ ಬ್ಯಾಡರ ಹಳ್ಳಿ ದಲಿತ ಕರಿಯಯ್ಯನು ಸಿಕ್ಕಿರುವನು. ಇವನ ಾರ ಊರಲ್ಲಿ ಬದುಕಬೇಕಾದರೆ ತಾನು 4 ಗಳಿಂದ ಫಸಲು ಮಾಡುತ್ತಿದ್ದ 3 ಎಕರೆ ಗುಂಟೆ ಸರ್ಕಾರ ಭೂಮಿಯನ್ನೂ ಬಿಟ್ಟು ೕಕಂತೆ. ಈ ಮಾತಿಗೆ ಪ್ರತಿ ಮಾತಾಡಿ ಕರಿಯಯ್ಯನ ಗತಿಕಾಣಿಸಿ ಬಿಡುತ್ತಾರಂತೆ.

ಾಳೇಗಾರಿಕೆಗೆ ಹೆಸರಾದ ಬ್ಯಾಡರಹಳ್ಳಿಯಲ್ಲಿ ರು ತಲೆ ಎತ್ತುವಂತಿಲ್ಲ. ಇವರೇನಾದರೂ ರ ಎತ್ತಿದರೆ, ಇವರಪ್ಪದಿರ ಮಾನದ ಜೊತೆ ೕಳಿದಷ್ಟು ದಂಡ ಮಡಗಿ ಹತ್ತು ಜನರ ದೆ ತಪ್ಪುಕೇಳಕೊಬೇಕಂತೆ. ಹೀಗೆಲ್ಲಾ ಗೊಳಗಾದ ಕೆಲವು ಹರಿಜನರು ಈ ಹಿಂದೆ ನ್ನೇ ಬಿಟ್ಟು ಬೇರೆ ಬೇರೆ ಊರುಗಳಲ್ಲಿ ನೆಲ ರು.

ಾರಾರು ದಲಿತರಿದ್ದ ಈ ಗ್ರಾಮದಲ್ಲಿ ಈಗ ೬೦ ಹರಿಜನ ಕುಟುಂಬಗಳಿವೆ. ಇವರ ತಿಗಳು ಚಿಂತಾಜನಕ. ಇಲ್ಲಿರುವ ಪ್ರತಿ ಶ ದಲಿತರು ಜೀತಮಾಡಿ ಜೀವನ ನಡೆಸ .

ಊರಿಗೆ ಸೇರಿದ ಸ.ನಂ. ೨೧೩ ರಲ್ಲಿ ಕರೆ ೨೦ ಗುಂಟೆ ಸರ್ಕಾರಿ ಭೂಮಿ, ಕಲ್ಲು ಗಳಿಂದ ಕೂಡಿತ್ತು. ನಿರ್ಗತಿಕ ಕರಿ ಯ್ಯನು, ಬೇರು ಬೊಡ್ಡೆ ಕಿತ್ತು ೪ ವರ್ಷಗಳಿಂ ವ್ಯವಸಾಯ ಮಾಡಿಕೊಂಡು ಜೀವಿಸುತ್ತಿ . ಸಹಿಸದ ಗ್ರಾಮದ ಕೆಲವು ಸವರ್ಣೀ ಇವನು ಬೆಳೆದ ಫಸಲಿಗೆ ದನಕರುಗಳನ್ನು ನಾಶಮಾಡುತ್ತಿದ್ದರು. ಇದನ್ನು ಸಹಿಸಿ ಾರದೆ ಕರಿಯಯ್ಯ ಅನಿವಾರ್ಯವಾಗಿ ಕ ೨೨-೯-೮೧ ರಂದು ರಕ್ಷಣೆ ಕೇಳಿ ೀಸರಿಗೆ ದೂರು ಕೊಟ್ಟನು. ಇದರಿಂದ ಗೆದ್ದ ಪಂಚಾಯ್ತಿ ಛೇರ್ಮನ್ ಹಾಗು ಮರಿಗೌಡರು ಮರ್ಯಾದೆ ಕಾಪಾಡಿಕೊಳ್ಳಲು, ಕರಿಯಯ್ಯ ಮಾಡುತ್ತಿದ್ದ ಭೂಮಿಗೆ ಒಂದು ಕಥೆ ಕಟ್ಟಿರುವರು.

ಈ ಭೂಮಿ ಗ್ರಾಮದ ಕಟ್ಟೆಗೆ ಸೇರಿದ್ದೆಂತಲೂ, ಇದು ಗ್ರಾಮಕ್ಕೆ ಬೇಕೇ ಬೇಕೆಂತಲೂ ಹೇಳುತ್ತಾ ಕರಿಯಯ್ಯನ ಭೂಮಿ ಮೇಲೆ ಕಣ್ಣಿಟ್ಟಿರುವರು. ಸುಮಾರು ೪ ವರ್ಷಗಳಿಂದ ಸುಮ್ಮನಿದ್ದ ಈ ಜನರು ಕರಿಯಯ್ಯ, ರಕ್ಷಣೆ ಕೇಳಿ ಪೊಲೀಸರಿಗೆ ದೂರು ಕೊಟ್ಟಮೇಲೆ ಹೊಸಕಥೆ ಸೃಷ್ಟಿಸಿರುವರ ಪರವಾಗಿ ತಾಲ್ಲೂಕು M.L.A. ವಿಶ್ವನಾಥರು ಪಣತೊಟ್ಟು ನಿಂತಿರುವರು.

ಈಗ ಕರಿಯಯ್ಯನ ಭೂ ಸಮಸ್ಯೆ ತಹಸಿಲ್ ದಾರರ ಮುಂದೆ ನಿಂತಿದೆ. ರಾಜಕಾರಣಿಗಳ ಒತ್ತಡಕ್ಕೆ ಸಿಕ್ಕಿಕೊಂಡಿರುವ ಇಲ್ಲಿನ ತಹಸಿಲ್ ದಾರರು ಅನಿವಾರ್ಯವಾಗಿ ದಲಿತನ ಅನ್ನದ ಬಾಯಿಗೆ ಮಣ್ಣು ಹಾಕಲು ನಿಂತಿದ್ದಾರೆಂದು ಕರಿಯಯ್ಯ ದುಃಖಿಸುತ್ತಿರುವನು. —ಆರ್.ಎಸ್.ಡಿ

ಮತಾಂತರ : ವಿಚಾರ ಸಂಕೀರಣ

ಮಂಗಳೂರು, ಸೆಪ್ಟಂಬರ್ 13

ಕರ್ನಾಟಕ ದಲಿತ ಸಂಘರ್ಷ ಸಮಿತಿ, ದಕ್ಷಿಣ ಕನ್ನಡ ಜಿಲ್ಲಾ ಶಾಖೆಯು ಮತಾಂತರ ಕುರಿತು ವಿಚಾರ ಗೋಷ್ಠಿಯೊಂದನ್ನು ಏರ್ಪಡಿಸಿತ್ತು. ಶ್ರೀ ದೇವಯ್ಯ ಹರವೆ ಅವರ ಅಧ್ಯಕ್ಷತೆಯಲ್ಲಿ ಸೂಳ್ಯದ ಪುರುಷೋತ್ತಮ ಬಿಳಿಮಲೆ ಹಾಗೂ ಪುತ್ತೂರಿನ ಬಿ. ರಾಮಕೃಷ್ಣ ಅವರುಗಳು ಮತಾಂತರ ಕುರಿತು ಪ್ರಬಂಧಗಳನ್ನು ಮಂಡಿಸಿದರು.

ಮತಾಂತರ ಉದ್ಘಾಟನೆ

ಮೈಸೂರು, ಸೆಪ್ಟಂಬರ್ 26

ಮೈಸೂರು ವಿಶ್ವವಿದ್ಯಾನಿಲಯ ದಲಿತ ವಿದ್ಯಾರ್ಥಿ ಒಕ್ಕೂಟವು ತನ್ನ ವಾರ್ಷಿಕ ಉದ್ಘಾಟನ ಜೊತೆಯಲ್ಲಿ ಮತಾಂತರ ಕುರಿತು ವಿಚಾರ ಸಂಕೀರಣವೊಂದನ್ನು ಏರ್ಪಡಿಸಿತ್ತು.

ಡಾ. ಸಿ. ಪಾರ್ವತಮ್ಮ ಅವರ ಅಧ್ಯಕ್ಷತೆಯಲ್ಲಿ ದೇವಯ್ಯ ಹರವೆಯವರು ದಲಿತ ವಿದ್ಯಾರ್ಥಿ ಒಕ್ಕೂಟದ ವಾರ್ಷಿಕ ಉದ್ಘಾಟನೆ ಮಾಡಿದರು. ನಂತರ ಮತಾಂತರ ಕುರಿತು, ಗೋವಿಂದಯ್ಯ ಗುರುರಾಜ ಬೀಡಿಕರ್ ಮತ್ತು ಡಾ. ಯು.ಆರ್. ಅನಂತಮೂರ್ತಿಯವರು ಮಾತನಾಡಿದರು

ಮಧ್ಯಾಹ್ನದ ಚರ್ಚಾಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ಸಂಜೀವಯ್ಯ ವಹಿಸಿಕೊಂಡಿದ್ದರು. ಈ ಗೋಷ್ಠಿಯಲ್ಲಿ (1) ಮತಾಂತರ ಪಲಾಯನವೆ ಅಥವಾ ಪ್ರತಿಭಟನೆಯೇ? (2) ಸಂಪೂರ್ಣನಂದ ಪ್ರತಿಮೆ ಅನಾವರಣ ಮಾಡಿ ಅವಮಾನಿತರಾದ ಶ್ರೀಮಂತ ಅಸ್ಪೃಶ್ಯ ಜಗಜೀವನರಾಂ ಹಾಗೂ ಗಂಗಾಜಲ ಮುಟ್ಟಿದ್ದಕ್ಕೆ ಕೊಲೆಯಾದ ಅಸ್ಪೃಶ್ಯರು "ಮುಸ್ಲೀಮರಾಗಿದ್ದರೆ ನಾವು ಈ ಅವಮಾನ ಮತ್ತು ಕೊಲೆಗೆ ತುತ್ತಾಗುತ್ತಿರಲಿಲ್ಲ" ಅಂದುಕೊಂಡರೆ ನೀವೇನು ಅನ್ನುವಿರಿ ? (3) ಅಸ್ಪೃಶ್ಯತೆ–ಜಾತಿ ಇಲ್ಲದ ಹಿಂದೂ ಧರ್ಮ ಸಾಧ್ಯವೆ ? (4) ಮತಾಂತರ ಬೇಡವೆ? ಬೇಡವಾದರೆ ಯಾಕೆ ? ಬೇಕಾದರೆ ಯಾವ ಮತ ? ಮತ್ತು ಯಾಕೆ ?

—ಮುಂತಾದ ಪ್ರಶ್ನೆಗಳ ಬಗ್ಗೆ ಧೀರ್ಘ ಚರ್ಚೆ ನಡೆಯಿತು. ಚರ್ಚೆಯಲ್ಲಿ ವೇಣು ಗೋಪಾಲ, ಕೆ. ರಾಮದಾಸ್, ಕೃಷ್ಣವಟ್ಟಂ, ಮಂಟೆಲಿಂಗಯ್ಯ, ರಂಜಾನ್‌ದರ್ಗಾ, ಸುಮಿತ್ರಾ ಬಾಯಿ, ಮ.ನ. ಜವರಯ್ಯ, ರಾಮದೇವರಾಕೆ, ದೇವನೂರ ಮಹಾದೇವ ಮುಂತಾದವರು ಭಾಗ ವಹಿಸಿದ್ದರು.

ನಂತರ ವಿದ್ಯಾರ್ಥಿಗಳು "ಬೆಲ್ಚಿ" ಎಂಬ ನಿಜ ನಾಟಕವನ್ನು ಪ್ರದರ್ಶಿಸಿದರು.

ಕಾಡ ಕಲ್ಲು

ಕಾಡಕಲ್ಲು, ಹೊಲೆಗೇರಿಯ ನಾಯಿ
ಇವ ಕೊಂಡಾಡ ಬಂದೆ
ನೋಡನಲಿಂಗ, ಹಿಂದೆ ಬಿಟ್ಟೋಡಡದ ಹೊಲೆ
ಗುಣ

ಇದೆಂದಿಂಗೆ ಹರಿಗು

—ನಗೆಯ ಮಾರಿತಂದೆ

ನಗೆಯ ಮಾರಿತಂದೆಯ ಈ ವಚನ ಮತ್ತು ಪಂಚಮ ಸ. ೫ರಲ್ಲಿ ಪ್ರಕಟವಾದ ವಚನ ಹನ್ನೆರಡನೆ ಶತಮಾನದಲ್ಲಿ ಶೂದ್ರರು ಲಿಂಗವಂತರಾಗಿ ಪರಿವರ್ತಿತರಾಗುವ ಸಂಧಿ ಕಾಲದಲ್ಲಿ ಅವರ ಮನಸ್ಥಿತಿ ಹೇಗಿತ್ತೆಂಬುದನ್ನು ವಿಶ್ಲೇಷಿಸುತ್ತದೆ. ಬಸವಣ್ಣ ಲಿಂಗಧಾರಣೆ ಮಾಡುವ ಕ್ರಿಯೆಯನ್ನು ಆರಂಭಿಸಿದಾಗ ಕೆಳವರ್ಗದಿಂದ ಬಂದವರು ಅದನ್ನು ಆತ್ಮೋನ್ನತಿಯ ಸಾಧನೆಯ ಅಂಗವೆಂದು ಪರಿಗಣಿಸಿದರೆ ಅಥವಾ ಅಳುಕಿದರೆ ? ಅಳುಕಿರಬಹುದು ಎಂಬುದಕ್ಕೆ ನಿದರ್ಶನ ಮಾರಿತಂದೆಯ ವಚನಗಳು.

ಲಿಂಗದೇವರು ಹಳೆಮನೆ

ಸೂಚನೆ

ಚಂದದಾರರಿಗೆ :

ಚಂದಾದಾರರಿಗೆಲ್ಲ, ವಿಶೇಷ ಎಚ್ಚರಿಕೆ ವಹಿಸಿ ಪತ್ರಿಕೆಯನ್ನು ಅಂಚೆಮೂಲಕ ಕಳಿಸಲಾಗುತ್ತಿದೆ. ಸಂಚಿಕೆಯ ಆಯಾತಿಂಗಳ ಹತ್ತನೆ ತಾರೀಖಿನ ಒಳಗೆ ನಿಮಗೆ ತಲುಪದಿದ್ದಲ್ಲಿ ಅಂಚೆ ಕಛೇರಿಯಲ್ಲಿ ವಿಚಾರಿಸಿ ನಮಗೂ ಕಾರ್ಡ್ ಮೂಲಕ ಬರೆಯಿರಿ. ಇದಕ್ಕೂ ಮೊದಲು ನೀವು ಯಾರಕೈಲಿ ಚಂದಾಹಣ ನೀಡಿರುವಿರೊ ಅವರ ಚಂದಾಹಣವನ್ನು ಪತ್ರಿಕೆಗೆ ಕಳಿಸಿರುವುದರ ಬಗ್ಗೆ ಧೃಡ ಪಡಿಸಿಕೊಳ್ಳಿರಿ.

ಬರಹಗಾರರಿಗೆ :

ವರದಿ, ಸಂದರ್ಶನ, ಅನುಭವ, ಮಾತುಕತೆ, ಲೇಖನ ಕತೆ ಕಾವ್ಯ ಇತ್ಯಾದಿ ಎಲ್ಲಾ ಪ್ರಕಾರದ ಬರವಣಿಗೆಗೂ ಸ್ವಾಗತ. ಆದರೆ ಸಂಕ್ಷಿಪ್ತವಾಗಿ ಬರೆದುಕಳಿಸಿ.

ಏಜೆಂಟರುಗಳಿಗೆ :

ಆಯಾ ತಿಂಗಳ ಹದಿನೈದನೆ ತಾರೀಖಿನ ಒಳಗಾಗಿ ಹಿಂದಿನ ತಿಂಗಳ ಲೆಕ್ಕ ಚುಕ್ತ ಮಾಡಬೇಕು. ಜೊತೆಗೆ ಮುಂದಿನ ತಿಂಗಳಿಗೆ ಬೇಕಾಗುವ ಹೆಚ್ಚುವರಿ ಪ್ರತಿಗಳ ಸಂಖ್ಯೆಯನ್ನು ತಿಳಿಸಬೇಕು.—ವ್ಯವಸ್ಥಾಪಕ

ಬೇಡ ಎನಲಿ ಯಾವ ನಾಲಿಗೆಯಲಿ

ಕಾಲನು ಭಾರತಮಾತೆಯ ಹಣೆಯಲ್ಲಿ ಮೀನಾಕ್ಷಿಪುರಂ ಬರಹಾ ಬರೆದು ಮುಂದಿನ ನಡಿಗೆಗೆ ಕಣ್ಸನ್ನೆ ಮಾಡಿ ಹೋದನು. ಮೀನಾಕ್ಷಿಪುರಂ ರಹಮತ್‌ನಗರವಾಗುವ ಮುನ್ನ ಗುಜರಾತ್ ಬೆಂಕಿ ಸುಡುತ್ತಿತ್ತು. ಇದಾಗುವಾಗ ಇಲ್ಲಿ ಹೊಳೆನರಸಿಪುರದ ಹಿಂದೂ ಮತ್ತು ಅಸ್ಪೃಶ್ಯರ ಗಲಾಟೆಯ ನಿಜ ತಿಳಿಯಲು ಹೋದಾಗ ಅಲ್ಲೊಬ್ಬ ಅಸ್ಪೃಶ್ಯ ದೈವ ಭಕ್ತರು "ನಾವು ಮುಸ್ಲೀಮರಾಗದೆ ನಮಗೆ ಉಳಿಗಾಲವಿಲ್ಲ" ಎಂದಿದ್ದರು. ಅದಕ್ಕೆ ನಾನು "ಧರ್ಮವಲ್ಲ ನಮಗೆ ಬೇಕಿರುವುದು. ಎಲ್ಲ ಧರ್ಮಗಳ ತಿರಸ್ಕರಿಸುವುದು" ಎಂದುದಕ್ಕೆ ಅವರೆಂದರು : 'ಧರ್ಮ ತಿರಸ್ಕರಿಸ ವುದಕ್ಕಾದರೂ ನೀವು ಮೊದಲು ಉಳೀಬೇಕಲ್ಲ. ಉಳಿಯುವುದಕ್ಕೆ ಮುಸ್ಲಿಮರಾಗಬೇಕು'.

ಅವರ ಮಾತನ್ನು ನಾನು ಒಪ್ಪದೇ ಬಂದರೂ ಆ ಮಾತು ನನ್ನ ಮನದೊಳಗೇ ಕೂತು ಅವರಂದಿದ್ದು ನಿಜವಲ್ಲವೇ ಎಂದು ನುಡಿಯುತ್ತಿತ್ತು. ಅಸ್ಪೃಶ್ಯರು ನೋಡಲು ಚೆನ್ನಾಗಿದ್ದಾರೆ ಎಂಬ ಕಾರಣಕ್ಕೆ ಹೊಡೆತ ತಿಂದಿದ್ದರು. ಸವರ್ಣೀಯ ಹುಡುಗೀನ ಪ್ರೀತಿಸಿದ್ದಕ್ಕೆ ಕೊಲೆಯಾಗಿದ್ದರು. ಪಂಚಾಯ್ತಿ ಅಧ್ಯಕ್ಷರಾದ್ದಕ್ಕೆ ಜೀವ ತೆತ್ತಿದ್ದರು. ಅಸ್ಪೃಶ್ಯರ ದೇಹಕ್ಕೆ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿ ಆ ಉರಿಯುವ ದೇಹ ಕಂಡು ಸವರ್ಣೀಯ ಸಸ್ಯಾಹಾರಿ ಅಹಿಂಸಾವಾದಿಗಳು ಆನಂದಿಸಿದ್ದರು. ಗಂಗಾಜಲ ತರುತ್ತಿದ್ದ ಅಸ್ಪೃಶ್ಯರನ್ನ ಕೊಲ್ಲಿಸಲು ವಿಪ್ರನು ಡಕಾಯಿತರೊಡನೆ ಅಡ್ಡಗಟ್ಟಿ, ಡಕಾಯಿತರೇ ಕೊಲೆ ಮಾಡಲು ಹಿಂದೆಗೆದಾಗ ಕ್ರೂರ ವಿಪ್ರನು ಧರ್ಮ ಹಾಳಾಗುವುದೆಂದು ಕೊಲ್ಲಿಸಿದ್ದನು. ಬೆಲ್ಚಿಗಿಂತಲೂ ಕ್ರೂರವಾಗಿ, ಅಸ್ಪೃಶ್ಯರ ಮದುವೆ ದಿಬ್ಬಣ ಸವರ್ಣೀಯ ಕೇರಿ ನಡುವೆ ಬಂದದಕ್ಕಾಗಿ ಹದಿನಾಲ್ಕು ಜನ ಜೀವ ತೆತ್ತು ರಕ್ತ ಚೆಲ್ಲಾಡಿತು. ಪ್ರಾಣಿದಯೆ ಸಂಸ್ಥೆಯವರಾದರೂ ಈ ಬಗ್ಗೆ ಮಾತಾಡಲಿಲ್ಲ! ಇದನ್ನು ಎಲ್ಲರೂ ತುಂಬಾ ಸಹಜವೆಂಬಂತೆ ಸಹಜವಾಗಿ ಮರೆತರು. ಇಂಥವೆಲ್ಲವೂ ನಮ್ಮ ಪ್ರಾಣ ಉಳಿದರೆ ಸಾಕು, ಸಮಾನತೆ ಆಮೇಲಿನ ಮಾತು ಎಂಬಂಥ ಅಸಹಾಯಕತೆಯಲ್ಲಿ ನಮ್ಮನ್ನು ನಿಲ್ಲಿಸಿದವು. ಆದಕ್ಕಾಗೆ ಮೀನಾಕ್ಷಿಪುರಂ ರಹಮತ್ ನಗರವಾದಾಗ ನಮ್ಮ ಪ್ರಾಣದ ಉಳಿವಿಗೆ ಒಂದು ಆಸೆ ಸಿಕ್ಕಿದಂತನ್ನಿಸಿತು.

ಈ ಅನ್ನಿಸಿಕೆ ನಡುವೆಯೂ ಭಯ ಆತಂಕ ಅಡಗಿದೆ. ಸರಳ ಭಾವುಕರಾದ ಮುಸ್ಲಿಮರ



ಬಗ್ಗೆ ಪ್ರೀತಿಯಿದ್ದರೂ ಅವರ ಮತ ನಿಷ್ಠೆ ಮತ
ಇಸ್ಲಾಂ ಧರ್ಮವು ಮನುಷ್ಯರ ಮೇಲೆ ಹಿಡಿ
ರುವ ಹಿಡಿತ ಭೀತಿಗೊಳಿಸುತದೆ. ಖೊಮೇ
ಕನಸಲ್ಲಿ ಬಂದು "ಸೋಷಲಿಸ್ಟರೇ ನೀವೇ ನ
ಮೊದಲ ಬಲಿ'' ಅನ್ನುತ್ತಿದ್ದಾನೆ. ಅದಕ್ಕಾ
ನನಗೆ ಪ್ರಿಯವಾದ ಬೌದ್ಧ ಧರ್ಮದ ಕಡೆ ನೋಡಿ
ರೆ ಅದು ಇಂದು ನಡೆಯದ ಕಾಸಾಗಿದೆ. ಗುಜರಾ
ಮಹಾರಾಷ್ಟ್ರದಲ್ಲಿನಮ್ಮವರ ದೇಹ ಬೌದ್ಧರಾಗ
ಸುಡಿಸಿಕೊಳ್ಳುವ ವಸ್ತುವಾಗಿದೆ.

ಮತಾಂತರಕ್ಕೆ ಅಭ್ಯಂತರವಿಲ್ಲವೆಂದು ದಲಿ
ಸಂಘರ್ಷ ಸಮಿತಿ ನಿರ್ಣಯಿಸಿದೆ. ಹರಿವ ನೀರ
ತಡೆಯಲು ದೊಣ್ಣೆನಾಯಕರು ಅನಗತ್ಯವಾ
ಚಡ್ಡಿ ಧರಿಸಿಕೊಂಡು ರಾಖಿ ಹಿಡಿದು ತಮ್ಮನ
ತಾವು ನೋಡಿಕೊಳ್ಳದೆ ಅಸಹ್ಯಕರವಾಗಿ ಓಡಾ
ತ್ತಿದ್ದಾರೆ. ನನ್ನ ಹೆಂಡತಿ ಸುಮಿತ್ರಾಳೂ ಸ್ನೇ
ತ ಗೋವಿಂದಯ್ಯನೂ ಕಟ್ಟಾ ಮುಸ್ಲಿಂವಾ
ಗಳಾಗಿ ಇಂದೊ ನಾಳೆಯೋ ಮತಾಂತರವಾಗಲ
ಬೇಕು ಎಂಬ ಮನಸ್ಥಿತಿಯಲ್ಲಿದ್ದಾರೆ. ಈ ಪ್ರಭಾ
ದಿಂದಾಗೇನೊ ನಾಲ್ಕನೆ ಕ್ಲಾಸು ಓದುವ ಮಗ
ಉಜ್ವಲಾ ತನ್ನಷ್ಟಕ್ಕೆ ತಾನೆ ಯಾರಿಗೂ ತಿಳಿ
ದಂತೆ ತನ್ನ ಪುಸ್ತಕದಲ್ಲಿ ಉಜ್ವಲಾಖಾನ್ ಎಂ
ಬರೆಯುತ್ತಿದ್ದಾಳೆ, ಮೊನ್ನೆತಾನೆ, ನಮ್ಮ ಲೋ
ಸಭಾ ಸದಸ್ಯ ಶ್ರೀನಿವಾಸ ಪ್ರಸಾದ್‌ರ ತಂದೆ
ವರು "ದೇವರೆ ನಮ್ಮ ಹೊಲೆ ಮಾದಿಗರ
ಜನ್ಮಕೊಡಬೇಡ. ಕೊಟ್ಟರೆ ಮುಸ್ಲಿಮರಾ
ಹುಟ್ಟಿಸು''ಎಂದಮಾತು ನನ್ನಸುತ್ತಲೂ ಸುತ್ತಾ
ದುತ್ತಿದೆ.

ಹೀಗಾಗಿ ಮತಬೇಡ ಅನ್ನುವ ನನ್ನ ನಾಲಿ
ಯು ನನ್ನ ಜನರ ಪ್ರಾಣ ಪಕ್ಷಿಗಳಿಗಾಗಿ ಮತ
ಒಡೆದುಕೊಂಡಿರುವ ಅಸ್ಪೃಶ್ಯರೆಲ್ಲರೂ ಕನಿ
ಒಂದಾಗುವರೆಂಬ ಆಸೆಯಿಂದಾಗಿ ಮತಾಂತ
ಬೇಡ ಎಂದು ನುಡಿಯದಂತಾಗಿದೆ.

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ, ವಿನ್ಯಾಸ ಪ್ರಿಂಟರ್ಸ್, ಮೈಸೂರು-9 ಇಲ್ಲಿ ಮುದ್ರಿಸಲ್ಪಟ್ಟು ಎಚ್. ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು. ವಿಳಾಸ : ಮಾಸ್ತಿಗುಡಿ, 2ನೇ ಕ್ರಾಸ್, ಅಶೋಕಪುರಂ, ಮೈಸೂರು-570009.